
ಕರ್ನಾಟಕ ಸರ್ಕಾರ

ಪರಂಪರೆ ಮಾಲಿಕೆ

# ಬಿಜಾಪುರ



ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ
ಮೈಸೂರು






ಯಾವುದೇ ಪ್ರವಾಸಿಯ ಕಣ್ಣುಗಳಿಗೆ ಬಿಜಾಪುರದ ಸ್ಮಾರಕಗಳು ಹೇಗೆ ಹಬ್ಬವೋ, ಹಾಗೆಯೇ ಬಿಜಾಪುರದ ಸ್ಥಳೀಯ ಖಾದ್ಯಗಳು ಸಹ ಬಾಯಲ್ಲಿ ನೀರೂರಿಸುವ ಸ್ಥಳೀಯ ಆಹಾರ ಮತ್ತು ಹಣ್ಣುಗಳನ್ನು ಯಾರೂ ತಪ್ಪಿಸುವಂತಿಲ್ಲ





ಪರಂಪರೆ ಮಾಲಿಕೆ

# ಬಿಜಾಪುರ

ಬಿಜಾಪುರದಲ್ಲಿ ನಡೆದ
79ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ
ಸಂದರ್ಭದಲ್ಲಿ ಹೊರತಂದ ವಿಶೇಷ ಆವೃತ್ತಿ


ಪ್ರಧಾನ ಸಂಪಾದಕರು:
ಪಿ.ಎಸ್. ವಸ್ತ್ರದ. ಐ.ಎ.ಎಸ್.

ಸಂಪಾದಕರು:
ಡಾ. ಹೆಚ್.ಜಿ. ದಡ್ಡಿ

ಕನ್ನಡ ಅನುವಾದ
ಎನ್.ಆರ್. ಸುಬ್ಬರಾವ್ ಕೆ.ಎ.ಎಸ್ (ನಿ)



ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ
ಮೈಸೂರು

ಮೊದಲ ಮುದ್ರಣ : 2009 / ಪ್ರತಿಗಳು 1000
ದ್ವಿತೀಯ ಮುದ್ರಣ : 2013 / ಪ್ರತಿಗಳು 1000

ಹಕ್ಕುಗಳು: ©

**ಆಯುಕ್ತರು**
ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ
ಮೈಸೂರು – 570010 ದೂ: 0821 2424673
ಈ–ಮೇಲ್: commr_amh@yahoo.in

**ಛಾಯಾಚಿತ್ರಗಳು:**
ಮೇಲುಕೋಟೆ ಎನ್. ಮುರಳೀಧರ್

**ಸೌಜನ್ಯ:**
ಭಾರತೀಯ ಪುರಾತತ್ವ ಸರ್ವೇಕ್ಷಣಾ

ISBN 978-81-923973-6-8
ಬೆಲೆ: ₹ 99

**ಮುದ್ರಣ**

ಮಾರ್ಕೆಟಿಂಗ್ ಕನ್ಸಲ್ಟೆಂಟ್ಸ್ ಅಂಡ್ ಏಜೆನ್ಸೀಸ್ ಲಿ.
ಬೆಂಗಳೂರು

# ಪರಿವಿಡಿ


ಬಿಜಾಪುರ 6

ಸಂಕ್ಷಿಪ್ತ ಇತಿಹಾಸ 8

ಪ್ರೇಕ್ಷಣೀಯ ಸ್ಥಳಗಳು

- ಕೋಟೆ ಮತ್ತು ಹೆಬ್ಬಾಗಿಲುಗಳು 14
- ಬಡೀ ಕಮಾನ್ 17

ಮಸೀದಿಗಳು

- ಜಾಮಿ ಮಸೀದಿ 18
- ಮೆಕ್ಕಾ ಮಸೀದಿ 20
- ಅಂಡೂ ಮಸೀದಿ 22
- ಗೋರಿಗಳು
- ಷಾ ನವಾಜ್ ಖಾನ್‌ನ ಸಮಾಧಿ 24
- ಗೋಲ್ ಗುಂಬಜ್ 26
- ಇಬ್ರಾಹಿಂ ರೋಜಾ 30
- ಜೋಡ್ ಗುಂಬಜ್ 32
- ದೆವ್ವ ಹುಣಸಿ ಮರ 33
- ಬಾರಾ ಕಮಾನ್ 34
- ಹಾಸಿಂ ಪೀರ್ ದರ್ಗಾ 36

ಅರಮನೆಗಳು

- ಗಗನ್ ಮಹಲ್ 38
- ಅದಾಲತ್ ಮಹಲ್ 40
- ಆನಂದ್ ಮಹಲ್ 42
- ಅರಸ್ ಮಹಲ್ 44
- ಜಹಾಜ್ ಮಹಲ್ 48
- ಪಾನಿ ಮಹಲ್ 50
- ಮೆಹ್ತರ್ ಮಹಲ್ 52
- ಅಸರ್ ಮಹಲ್ 54

ಕೆರೆ ಕಟ್ಟೆಗಳು

- ತಾಜ್ ಬಾವಡಿ 56

ಬಂದೂಕುಗಳು

- ಮಾಲಿಕ್ ಎ ಮೈದಾನ್ ತೋಪು 58
- ಲಂಡಾ ಕಸಬ್ ತೋಪು 60

ಬಿಜಾಪುರ ಚಿತ್ರಕಲೆ 63

ಬಿಜಾಪುರ ದೇವಾಲಯಗಳು


- ಸಿದ್ಧರಾಮೇಶ್ವರ ದೇವಾಲಯ 68
- ನರಸಿಂಹ ದೇವಾಲಯ 70

ಬಿಜಾಪುರದ ಸುತ್ತಮುತ್ತ


- ಸಂಗೀತ ಮಹಲ್ 73
- ಐನಾಪುರ ಸಮಾದಿ ಮತ್ತು ಮಹಲ್ 74
- ಅಫ್ಜಲ್ ಖಾನ್‌ನ ಸ್ಮಾರಕ ಸಮಾಧಿ 76

ಬಿಜಾಪುರ ಚರ್ಚ್ 80


ಬಿಜಾಪುರದ ನಕ್ಷೆ 82

# ಬಿಜಾಪುರ



ಬೆಂಗಳೂರಿನ ವಾಯುವ್ಯ ದಿಕ್ಕಿನಲ್ಲಿ 525ಕಿ.ಮೀ.ಗಳ ದೂರವಿರುವ ಬಿಜಾಪುರವು ಶ್ರೀಮಂತ ಸಾಂಸ್ಕೃತಿಕ ಪರಂಪರೆಗೆ ಹೆಸರುವಾಸಿಯಾಗಿದೆ. ಆದಿಲ್ ಷಾಹಿಗಳ ಕಲೆ ಮತ್ತು ವಾಸ್ತುಶಿಲ್ಪದ ಬಗೆಗಿನ ಪ್ರೀತಿಯನ್ನು ತೋರಿಸುವ ಮೂಕ ಸಾಕ್ಷಿಗಳಾಗಿ ಬಿಜಾಪುರದ ಸ್ಮಾರಕಗಳು ವಿಜೃಂಭಿಸಿ ನಿಂತಿವೆ. ಶೋಭಾಯಮಾನ ಗೋಲ್ ಗುಂಬಜ್ ಮತ್ತು ಇಬ್ರಾಹಿಂ ರೋಜಾಗಳು ರಾಷ್ಟ್ರದ ಪರಂಪರೆಯ ನಕ್ಷೆಯಲ್ಲಿ  ಬಿಜಾಪುರಕ್ಕೆ ಸ್ಥಾನವನ್ನು ಕಲ್ಪಿಸಿವೆ. ಆದಿಲ್ ಷಾಹಿಗಳು ನಿರ್ಮಿಸಿದ ಕಟ್ಟಡಗಳು ಕರ್ನಾಟಕದ ಪರಂಪರಾಗತ ಕಲೆಯಲ್ಲಿ ಪ್ರಮುಖ ಸ್ಥಾನವನ್ನು ಪಡೆದಿವೆ. ಬಿಜಾಪುರದ ಸ್ಮಾರಕಗಳು ಭಾರತದ ಇಂಡೋ-ಸಾರ್ಸೆನಿಕ್ ಸ್ಮಾರಕಗಳಲ್ಲಿ ಎದ್ದು ಕಾಣುತ್ತವೆ.



# ಸಂಕ್ಷಿಪ್ತ ಇತಿಹಾಸ

ಕಲ್ಯಾಣದ ಚಾಲುಕ್ಯರ ಎರಡನೆಯ ರಾಜಧಾನಿಯಾಗಿದ್ದ ಬಿಜಾಪುರವು ವಿಜಯಪುರ ಎಂದು ಪ್ರಸಿದ್ಧಿ ಪಡೆದಿತ್ತು. ಇದನ್ನು ವಿವಿಧ ಕಾಲಗಳಲ್ಲಿ ಬಿಜ್ಜನಹಳ್ಳಿ, ವಿದ್ಯಾಪುರ, ಮಹಮ್ಮದಪುರ ಎಂದೂ ಕರೆಯಲಾಗಿತ್ತು. ದೇವಗಿರಿಯ ಯಾದವ ದೊರೆಗಳು ವಿಜಯಪುರವನ್ನು ತಮ್ಮ ರಾಜಧಾನಿಯಾಗಿ ಹೊಂದಿದ್ದರು. ದೇವಗಿರಿಯ ಯಾದವರ ಕೊನೆಯ ದೊರೆ ಶಂಕರದೇವನು, ದೆಹಲಿಯ ಸುಲ್ತಾನ ಅಲ್ಲಾವುದ್ದೀನ್ ಖಿಲ್ಜಿಯ ಸೇನಾಧಿಕಾರಿ ಮಲ್ಲಿಕ್ ಕಾಫರ್‌ನಿಂದ ಕೊಲ್ಲಲ್ಪಟ್ಟಾಗ, ಬಿಜಾಪುರದಲ್ಲಿ ಮುಸಲ್ಮಾನರ ಆಳ್ವಿಕೆ ಪ್ರಾರಂಭವಾಯಿತು (ಕ್ರಿ.ಶ. 1316)

ಬಹುಮನಿಗಳ ಪತನಾನಂತರ ಅಸ್ತಿತ್ವಕ್ಕೆ ಬಂದ ಐದು ಸಾಮ್ರಾಜ್ಯಗಳ ಪೈಕಿ ಒಂದಾದ ಆದಿಲ್‌ಷಾಹಿಗಳು ಬಿಜಾಪುರವು ಕೀರ್ತಿಗಳಿಸಲು ಕಾರಣರು. ಇವರ ಮೊದಲ ದೊರೆ ಯೂಸುಫ್ ಆದಿಲ್‌ಖಾನ್. ಬಹಮನಿ ಅರಸನ ಸೇನಾಧಿಪತಿಯಾಗಿದ್ದ ಈತ ಟರ್ಕಿ ಮೂಲದವನು. ಈತ ಬಹಮನಿ ಅರಸರು ದುರ್ಬಲರಾದುದರ ಪ್ರಯೋಜನ ಪಡೆದು ಕ್ರಿ.ಶ. 1489ರಲ್ಲಿ ತನ್ನನ್ನು ಬಿಜಾಪುರದ ಷಾಹ್ ಎಂದು ಘೋಷಿಸಿಕೊಂಡ.

ಕ್ರಿ.ಶ. 1489ರಿಂದ 1686ರವರೆಗೆ ಇನ್ನೂರು ವರ್ಷಗಳ ಕಾಲ ಒಂಭತ್ತು ಮಂದಿ ಆದಿಲ್ ಷಾಹಿ ದೊರೆಗಳು ಬಿಜಾಪುರವನ್ನು ಆಳಿ, ಬಿಜಾಪುರವು ದಕ್ಷಿಣಭಾರತದ ಸಾಮ್ರಾಜ್ಯಗಳಲ್ಲಿ ಶಕ್ತಿಶಾಲಿಯೆಂದು ಗುರ್ತಿಸಲು ಕಾರಣರಾದರು. ಬಿಜಾಪುರದ ಬೆಳವಣಿಗೆಯನ್ನು ಕಂಡ ವಿದೇಶೀ ಪ್ರವಾಸಿಗರು ಅದನ್ನು "ದಕ್ಷಿಣದ ರಾಣಿ" ಎಂದು ಕರೆದರು. ಆದಿಲ್‌ಷಾಹಿಗಳು ಕಲೆ, ವಾಸ್ತುಶಿಲ್ಪ ಮತ್ತು ಸಾಹಿತ್ಯದ ಆರಾಧಕರಾಗಿದ್ದರು.



ಯೂಸುಫ್ ಆದಿಲ್‌ಷಾ
(1489 -1510)



ಇಸ್ಮಾಯಿಲ್ ಆದಿಲ್‌ಷಾ
(1510 -1534)



ಮೊದಲನೆಯ ಇಬ್ರಾಹಿಂ ಆದಿಲ್‌ಷಾ
(1534 -1557)



ಆಲಿ ಆದಿಲ್‌ಷಾ
(1557 -1580)

ಆದಿಲ್ ಷಾಹಿಗಳಿಗೆ ವಿಜಯನಗರ ಸಾಮ್ರಾಜ್ಯದೊಂದಿಗೆ ಆಗಾಗ ಘರ್ಷಣೆಗಳಿದ್ದರೂ ಅವರು ಸಾಮಾನ್ಯವಾಗಿ ಮತೀಯ ಸೌಹಾರ್ದತೆಯ ನೀತಿಯನ್ನು ಅನುಸರಿಸಿದ್ದರು. ಒಂದನೆಯ ಆದಿಲ್‌ಷಾಹನು ವಿಜಯನಗರದ ರಾಮರಾಯನೊಂದಿಗೆ ಒಳ್ಳೆಯ ಸಂಬಂಧವನ್ನು ಹೊಂದಿದ್ದನು, 1564ರಲ್ಲಿ ವಿಜಯನಗರಕ್ಕೆ ವಿರುದ್ಧವಾದ ಒಕ್ಕೂಟವನ್ನು ಸೇರಬೇಕಾಯಿತು. ಷಾಹಿ ಸಾಮ್ರಾಜ್ಯಗಳು ಅದೇ ವರ್ಷ ವಿಜಯನಗರವನ್ನು ಸೋಲಿಸಿದವು. ಆಲಿ ಆದಿಲ್‌ಷಾಹ್ ಚಾಂದ್ ಬೀಬಿಯನ್ನು ವಿವಾಹವಾದ. ಆದಿಲ್ ಷಾಹಿ ಸಾಮ್ರಾಜ್ಯದ ಪ್ರಸಿದ್ಧ ಆಡಳಿತಗಾರ ಎರಡನೆಯ ಇಬ್ರಾಹಿಂ ಸಿಂಹಾಸನವೇರಿದಾಗ ಈತ ಒಂಭತ್ತು ವರ್ಷದವನಾಗಿದ್ದರೂ, ಚಿಕ್ಕಮ್ಮ ಚಾಂದ್ ಬೀಬಿಯ ಮಾರ್ಗದರ್ಶನದಲ್ಲಿ ಒಳ್ಳೆಯ ಆಡಳಿತಗಾರನೆಂದು ಹೆಸರು ಪಡೆದ.ಈತನ ಕಾಲದಲ್ಲಿ ಸಾಮ್ರಾಜ್ಯವು ವಿಸ್ತಾರಗೊಂಡಿದ್ದು ಮಾತ್ರವಲ್ಲದೆ, ಬಿಜಾಪುರವು ಸಮೃದ್ಧಿ ಮತ್ತು ಶ್ರೀಮಂತಿಕೆಯಿಂದ ಕೂಡಿತ್ತು.



ಎರಡನೆಯ ಇಬ್ರಾಹಿಂ ಆದಿಲ್‌ಷಾ
(1580 -1626)



ಮೊಹಮ್ಮದ್ ಆದಿಲ್‌ಷಾ
(1626 -1656)



ಅಲಿ ಆದಿಲ್‌ಷಾ
(1656 -1672)



ಸಿಕಂದರ್ ಆದಿಲ್‌ಷಾ
(1672 -1689)

## ಆದಿಲ್‌ಷಾಹಿ ಅರಸರ ವಂಶಾವಳಿ

(ಕ್ರಿ.ಶ. 1489 ರಿಂದ ಕ್ರಿ.ಶ. 1686ವರೆಗೆ)

- 1) ಯೂಸುಫ್ ಆದಿಲ್‌ಷಾ (1489 -1510)
  - 2) ಇಸ್ಮಾಯಿಲ್ ಆದಿಲ್‌ಷಾ (1510 -1534)
    - 3) ಮಲ್ಲು (1534)
    - ಆಲಮ್‌ಖಾನ್
    - 4) ಒಂದನೇ ಇಬ್ರಾಹಿಂ ಆದಿಲ್‌ಷಾ (1534 -1557)
      - ಇಸ್ಮಾಯಿಲ್
      - 5) ಅಲಿ ಆದಿಲ್‌ಷಾ (1557 -1580)
      - ಥಮಾಸಪ್ಪ
        - ಇಸ್ಮಾಯಿಲ್
        - 6) ಎರಡನೆಯ ಇಬ್ರಾಹಿಂ ಆದಿಲ್‌ಷಾ (1580 -1626)
          - ದರವೇಶ್
          - ಸುಲೇಮಾನ್
          - 8) ಮೊಹಮ್ಮದ್ ಆದಿಲ್‌ಷಾ (1626 -1656)
            - 8) ಎರಡನೆಯ ಅಲಿ ಆದಿಲ್‌ಷಾ (1656 -1672)
              - ಪಾದ್‌ಷಾ ಬೀಬಿ
              - ಹುಸೇನ್
              - 9) ಸಿಕಂದರ್ ಆದಿಲ್‌ಷಾ (1672 -1686)
          - ಖಿಜ್ರ
          - ಜುಹರಾ
          - ಬುರ್ಹಾನ
          - ಸುಲ್ತಾನ್
          - ಫಾತಿಮಾ
      - ಅಹಮದ್
      - ತಾನಿಬೀಬಿ
      - ಹಾದಿಜಾ ಸುಲ್ತಾನ್
    - ಅಬ್ದುಲ್ಲಾ
  - ಮರಿಯಾಮ ಸುಲ್ತಾನ್
  - ಬೀಬಿಸತಿ
  - ಖದೀಜಾ ಸುಲ್ತಾನ್



ಚಾಂದ್ ಬೀಬಿ

ಈತ ಪರ ಮತ ಸಹಿಷ್ಣುವಾಗಿದ್ದು, ತನ್ನ ಆಸ್ಥಾನದಲ್ಲಿ ಅನೇಕ ಹಿಂದೂ ವಿದ್ವಾಂಸರು, ಕವಿಗಳು ಮತ್ತು ಸಂಗೀತಗಾರರನ್ನು ಗೌರವಿಸಿದ್ದ. ಈತನಿಗೆ "ಜಗದೀರ್" (ಜಗದ್ಗುರು) ಎಂಬ ಅಡ್ಡ ಹೆಸರಿತ್ತು. ಈತನ ನಾಣ್ಯಗಳು ಈ ಹೆಸರಿನಿಂದ ಟಂಕಿಸಲ್ಪಟ್ಟಿದ್ದವು. ಈತ ತನ್ನ ರಾಜಧಾನಿಯ ಕಿಲ್ಲೆ ಒಳಗೆ "ದತ್ತಾತ್ರೇಯ ದೇವಾಲಯ"ವನ್ನು ಕಟ್ಟಿಸಿದ್ದ. ಅಲ್ಲದೆ, ಹಿಂದು ಮುಸ್ಲಿಮರ ನಡುವೆ ಸಾಂಸ್ಕೃತಿಕ ಬಾಂಧವ್ಯವನ್ನು ಬೆಸೆಯಲು ಶ್ರಮವಹಿಸಿದ. ಈತನೊಬ್ಬ ಉತ್ತಮ ಸಂಗೀತ ಪ್ರೇಮಿಯಾಗಿದ್ದನಲ್ಲದೆ ಸಂಗೀತದ ಮೇಲೆ ಗ್ರಂಥವನ್ನು ರಚಿಸಿದ್ದ. ಈತನ ಕಾಲದಲ್ಲಿ ಕ್ರಮವಾಗಿ ಸಂಗೀತೋತ್ಸವಗಳು ನಡೆಯುತ್ತಿದ್ದವು. ಬಿಜಾಪುರದ ಅನೇಕ ಅರಮನೆಗಳು, ಕೊಳಗಳು ಹಾಗೂ ಪ್ರಸಿದ್ಧ ಇಬ್ರಾಹಿಂ ರೋಜಾ ಈತ ನಿರ್ಮಿಸಿದವುಗಳಾಗಿವೆ.


ಎರಡನೆಯ ಇಬ್ರಾಹಿಂ ನಂತರ ಮಗ ಮಹಮ್ಮದ್ ಅಧಿಕಾರಕ್ಕೆ ಬಂದ. ಪ್ರಸಿದ್ಧ ಗೋಳಗುಮ್ಮಟ ಈತನ ಸೃಷ್ಟಿ. ಮೊಘಲರು ಹಾಗೂ ಮರಾಠರು ಬಿಜಾಪುರ ಮೇಲೆ ನಿಯಂತ್ರಣ ಸಾಧಿಸಲು ಸತತವಾಗಿ ಹೋರಾಡುತ್ತಿದ್ದರು. ಮೊಘಲರ ಆಕ್ರಮಣ ಮತ್ತು ಮರಾಠರ ಸುಲಿಗೆ ಈ ಸಾಮ್ರಾಜ್ಯವನ್ನು ದುರ್ಬಲಗೊಳಿಸಿದವು. ಔರಂಗಜೇಬನು ಬಿಜಾಪುರವನ್ನು 1686ರಲ್ಲಿ ಸ್ವಾಧೀನ ಪಡಿಸಿಕೊಂಡು ಅದರ ಕೊನೆಯ ದೊರೆ ಸಿಕಂದರ್‌ನನ್ನು ಸೆರೆಹಿಡಿದ. ಹೀಗೆ ಬಿಜಾಪುರ 1723ರವರೆಗೆ ಮೊಘಲರ ಆಳ್ವಿಕೆಗೆ, ನಂತರ 1723 ರಿಂದ 1760ರವರೆಗೆ ಹೈದರಾಬಾದ್ ನಿಜಾಮನ, ನಂತರ 1760 ರಿಂದ 1778ರವರೆಗೆ ಮರಾಠರ ಆಳ್ವಿಕೆಗೆ ಒಳಪಟ್ಟಿತು. ರಾಜ್ಯದ ದಕ್ಷಿಣ ಭಾಗವು 1778ರವರೆಗೆ ಹೈದರ್ ಮತ್ತು ಟಿಪ್ಪುವಿನ ಅಧೀನಕ್ಕೆ ಒಳಪಟ್ಟಿತು. 1818ರಲ್ಲಿ ಬ್ರಿಟಿಷರು ಬಿಜಾಪುರವನ್ನು ಮರಾಠರಿಂದ ಸ್ವಾಧೀನ ಪಡಿಸಿಕೊಂಡರು. 1864ರಲ್ಲಿ ಬಿಜಾಪುರವು ಜಿಲ್ಲೆಯಾಗಿ ಕಲಾದಗಿ ಅದರ ಕೇಂದ್ರಸ್ಥಾನವಾಯಿತು.


ಪುನಃ 1997ರಲ್ಲಿ ಬಿಜಾಪುರ ಜಿಲ್ಲೆಯು ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಾಗಿ ವಿಭಜಿಸಲ್ಪಟ್ಟಿತು. ಈ ಜಿಲ್ಲೆಗಳು ಶ್ರೀಮಂತವಾದ ಪರಂಪರೆ ಮತ್ತು ಸಂಸ್ಕೃತಿಗೆ ಹೆಸರಾಗಿವೆ. ವಿಶ್ವ ಪರಂಪರಾ ಕೇಂದ್ರವಾದ ಪಟ್ಟದಕಲ್ಲು, ಚಾಲುಕ್ಯ ಶೈಲಿಯ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಐಹೊಳೆ ಮತ್ತು ಬಾದಾಮಿ ಹೆಸರುವಾಸಿಯಾಗಿದೆ. ಕೂಡಲಸಂಗಮ ಮತ್ತು ಬಸವನ ಬಾಗೇವಾಡಿ ಮತ್ತೆರಡು ಪ್ರವಾಸಿ ಕ್ಷೇತ್ರಗಳು, ಹಲವಾರು ಆಕರ್ಷಣೀಯ ಸ್ಥಳಗಳು ಜಿಲ್ಲೆಯಾದ್ಯಂತ ಹರಡಿವೆ.

# ಪ್ರೇಕ್ಷಣೀಯ ಸ್ಥಳಗಳು

ಆದಿಲ್‌ಷಾಹಿ ಕಟ್ಟಡಗಳನ್ನು ಮೂರು ವರ್ಗಗಳಾಗಿ ವಿಂಗಡಿಸಬಹುದು; ಅರಮನೆಗಳು, ಮಸೀದಿಗಳು ಮತ್ತು ಬೃಹತ್ ಸಮಾಧಿಗಳು. ಕುಶಲಕರ್ಮಿಗಳ ಸಂಪೂರ್ಣ ಕುಶಲತೆಯನ್ನು ಸಮಾಧಿಗಳ ನಿರ್ಮಾಣದಲ್ಲಿ ಕಾಣಬಹುದು. ಇದರಿಂದಾಗಿ ಇವು ಎಂದೆಂದಿಗೂ ಆಕರ್ಷಕವಾಗಿ ಉಳಿಯುವಂತಾಗಿದೆ. ಇಬ್ರಾಹಿಂ ರೋಜಾ ಹಾಗೂ ಗೋಳ ಗುಮ್ಮಟವು ಈ ವರ್ಗಕ್ಕೆ ಸೇರುತ್ತವೆ.









# ಕೋಟೆ ಮತ್ತು ಹೆಬ್ಬಾಗಿಲುಗಳು


ಬಿಜಾಪುರದ ಕೋಟೆಯು ಹೊರಭಾಗದಲ್ಲಿ ಬೃಹತ್‌ಗೋಡೆ ಮತ್ತು ಒಳಭಾಗದಲ್ಲಿ ರಾಜಪ್ರಾಂಗಣವನ್ನೊಳಗೊಂಡ ನಗರವನ್ನು ರಕ್ಷಿಸುವ ಕಿಲ್ಲೆಯನ್ನು ಹೊಂದಿದ್ದು ಪಟ್ಟಣವನ್ನು ಆವರಿಸಿದೆ. ಕೋಟೆಯು ಸುಮಾರು 10 ಕಿ.ಮೀ. ಉದ್ದವನ್ನು ಹೊಂದಿದೆ. ಇದು ಅಂಡಾಕೃತಿಯಲ್ಲಿದ್ದು ಶಕ್ತಿ ಶಾಲಿಯಾದ ಗೋಡೆ ಹಾಗೂ 50 ಅಡಿ ಅಗಲದ ಕಂದಕ ಮತ್ತು 106 ಕೊತ್ತಳಗಳನ್ನು ಹೊಂದಿದೆ. ಕೋಟೆಯನ್ನು ಆಗಾಗ್ಗೆ ಬಲಪಡಿಸಲಾಗಿದೆ.

ಕೋಟೆಯ ಮಧ್ಯಭಾಗದ ಒಳ ಕಿಲ್ಲೆ ಸಹ ಬಲಿಷ್ಠವಾದ ಬುರುಜುಗಳು, ಕಟ್ಟೆಗಳು ಮತ್ತು ಕಂದಕವನ್ನು ಹೊಂದಿದೆ. ಕೋಟೆಗೆ ಐದು ಮಹಾದ್ವಾರಗಳಿದ್ದು, ಇವುಗಳಲ್ಲಿ ನಾಲ್ಕು ಈಗಲೂ ಬಳಕೆಯಲ್ಲಿವೆ. ಬಿಜಾಪುರವನ್ನು ಔರಂಗಜೇಬನು ಗೆದ್ದು ಮನಗೂಳಿ ಎಂಬ





ಮಹಾದ್ವಾರದ ಮೂಲಕ ನಗರವನ್ನು ಪ್ರವೇಶಿಸಿದ ನಂತರ,
ಈ ದ್ವಾರವನ್ನು ಫತೇ ದರ್ವಾಜ್ (ಜಯದ ಬಾಗಿಲು) ಎಂದೂ
ಕರೆಯಲಾಗುತ್ತಿದೆ. ಮಹಾದ್ವಾರಗಳ ಪೈಕಿ 'ಮೆಕ್ಕಾ ಮಹಾದ್ವಾರ' ಅತ್ಯಂತ
ಬಲಿಷ್ಠವಾದುದು ಮತ್ತು ಕ್ಲಿಷ್ಟವಾದುದು. ಇದರ ಬಾಗಿಲುಗಳನ್ನು
ದಪ್ಪನೆಯ ಮರದ ಹಲಗೆಗಳಿಂದ ಮಾಡಿದ್ದು ಅವಕ್ಕೆ ದಪ್ಪನೆಯ ಕಬ್ಬಿಣದ
ಮುಳ್ಳುಗಳಿಂದ ಕೂಡಿದ ಅಡ್ಡಪಟ್ಟಿಗಳನ್ನು ಹಾಕಲಾಗಿದೆ.
ಇವು ಅಭೇದ್ಯ ಬಾಗಿಲುಗಳಾಗಿದ್ದವು.







## ಬಡೀ ಕಮಾನ್

ಹೆಸರೇ ಸೂಚಿಸುವಂತೆ ಇದು ಬೃಹತ್ ಕಮಾನುಗಳನ್ನು ಹೊಂದಿದೆ. ತುದಿಯಲ್ಲಿ ಸುಂದರ ವಿನ್ಯಾಸದ ಮರದ ಕೈಗಳನ್ನು ಹೊಂದಿದ್ದು, ನಾಲ್ಕೂ ದಿಕ್ಕಿನಲ್ಲಿ ಪ್ರವೇಶ ದ್ವಾರಗಳಿವೆ.

# ಮಸೀದಿಗಳು

ಬಿಜಾಪುರ ನಗರದಾದ್ಯಂತ ಅನೇಕ ಮಸೀದಿಗಳು ಕಂಡುಬರುತ್ತವೆ. ಪ್ರತಿಯೊಂದು ಕಟ್ಟಡವೂ ತನ್ನದೇ ಆದ ಶಿಲ್ಪಕಲಾ ವೈಶಿಷ್ಟವನ್ನು ಪಡೆದಿವೆ. ಸಾಮಾನ್ಯವಾಗಿ ಎಲ್ಲಾ ಸಮಾಧಿಗಳು ಅವುಗಳ ಆವರಣದಲ್ಲಿ ಮಸೀದಿ ಅಥವಾ ಪ್ರಾರ್ಥನಾ ಮಂದಿರಗಳನ್ನು ಹೊಂದಿವೆ.

ಕೆಲವು ಮುಖ್ಯವಾದ ಮಸೀದಿಗಳೆಂದರೆ;

## ಜಾಮಿ ಮಸೀದಿ

ಇದು ಒಂದನೆಯ ಆದಿಲ್‌ಷಾನಿಂದ ನಿರ್ಮಿಸಲ್ಪಟ್ಟಿದ್ದು ವಿಶಾಲವಾದ ಚೌಕಾಕಾರದ ಕಂಬಗಳನ್ನು ಮತ್ತು ಕಮಾನುಗಳನ್ನು ಹೊಂದಿದ ಎತ್ತರ ಮತ್ತು ಘನವಾಗಿ ಕಾಣುವ ಆಕರ್ಷಕ ಕಟ್ಟಡಗಳಲ್ಲಿ ಒಂದಾಗಿದೆ. ಇದು ಸಮ ಪ್ರಮಾಣದ ಬೃಹತ್ ಗುಮ್ಮಟವನ್ನು ಹೊಂದಿದೆ. ಮಸೀದಿಯ ಒಳಭಾಗ ಸರಳತೆಯಿಂದ ಕೂಡಿದೆ.




ಇದರ ಮಧ್ಯದ ಮಿಹ್ರಬ್ ಶ್ರೀಮಂತ ವರ್ಣಗಳಾದ ಚಿನ್ನ, ಹಸಿರು ಮತ್ತು ಕೆಂಪು ಬಣ್ಣಗಳಿಂದ ಕೂಡಿದೆ. ಮಸೀದಿಯು ಆಯತಾಕಾರದಲ್ಲಿದ್ದು 400 X 280 ಅಡಿಗಳ ವಿಸ್ತೀರ್ಣವನ್ನು ಹೊಂದಿದೆ. ಇದರಲ್ಲಿ ನೀರಿನ ಚಿಲುಮೆ ಹಾಗೂ ಮಧ್ಯದಲ್ಲಿ ಕೊಳವಿದೆ. ಮುಖ್ಯ ಕಟ್ಟಡದಲ್ಲಿನ ಅಡ್ಡ ಕಂಬಗಳು ನೆಲವನ್ನು 45 ಸಮವಾದ ಚೌಕಗಳನ್ನಾಗಿ ಅಂದರೆ ಒಟ್ಟು 2286 ಅಂತಹ ಸ್ಥಳ ಅಥವಾ ಮುಸಲ್ಲಾಗಳನ್ನು ವಿಂಗಡಿಸಿವೆ. ಪ್ರತಿಯೊಂದು ಚೌಕಾಕಾರದ ಇಂತಹ ಮುಸಲ್ಲಾ ಪ್ರಾರ್ಥನೆ ಸಲ್ಲಿಸುವ ಒಬ್ಬನಿಗೆ ಸಾಕಾಗುತ್ತದೆ. ಮಸೀದಿಯ ವೈಶಾಲ್ಯತೆ, ಅದರಲ್ಲಿನ ಮಿನಾರ್‌ಗಳು, ಸರಪಳಿಗಳು, ಕೆತ್ತನೆಗಳು ಹಾಗೂ ಗೋಡೆಯ ಗೂಡುಗಳು ಯಾವುದೇ ಪ್ರವಾಸಿಗನಿಗೆ ಪರಿಣಾಮ ಬೀರುವಂತಹ ದೃಶ್ಯವನ್ನು ಒದಗಿಸುತ್ತದೆ. ಮಸೀದಿಯ ವಿಸ್ತಾರ 1,16,000 ಚದರ ಅಡಿಗಳಷ್ಟಿದೆ. ಮಸೀದಿಯನ್ನು ಈಗಲೂ ಪ್ರಾರ್ಥನೆ ಮಾಡುವ ಸಲುವಾಗಿ ಬಳಸಲಾಗುತ್ತಿದೆ.




## ಮೆಕ್ಕಾ ಮಸೀದಿ

ಇದು ಕೋಟೆಯ ಒಳಭಾಗದ ರಾಜಪ್ರಾಂಗಣ ಗೋಡೆಗೆ ಹೊಂದಿಕೊಂಡಂತಿದೆ. ಮೆಕ್ಕಾದಲ್ಲಿರುವ ಮಸೀದಿಯಂತೆ ಇರುವುದರಿಂದ, ಇದನ್ನು ಅದೇ ಹೆಸರಿನಿಂದ ಕರೆಯಲಾಗಿದೆ. ಇದು ಬಿಜಾಪುರದಲ್ಲಿರುವ ಸುಂದರವಾದ ಹಾಗೂ ಅತ್ಯಂತ ಚಿಕ್ಕ ಮಸೀದಿಯಾಗಿದೆ. ಇದು ಹೊರಾಂಗಣದ ಮಧ್ಯ ಭಾಗದಲ್ಲಿದ್ದು ಸುತ್ತಲೂ




ಕಮಾನುಗಳಿಂದ ಕೂಡಿದ ಅಂಗಳ ಅದರ ಮೇಲ್ಹಾವಣಿಯನ್ನು ಹೊಂದಿದೆ. ಇದರ ಶೈಲಿ ಮತ್ತು ವಾಸ್ತುಶಿಲ್ಪವು ಎರಡನೆಯ ಇಬ್ರಾಹಿಂ ಆದಿಲ್‌ಷಾನ ಕಾಲಕ್ಕೆ ಸೇರಿದಂತೆ ಕಂಡುಬರುತ್ತದೆ ಹಾಗೂ ಪ್ರಾಯಶಃ ಮಲಿಕ್ ಸಂದಲ್‌ನ ಮೇಲ್ವಿಚಾರಣೆಯಲ್ಲಿ ನಿರ್ಮಿಸಿರಬಹುದು.



# ಅಂಡೂ ಮಸೀದಿ

ಇದು ಎರಡಂತಸ್ತಿನ ಕಟ್ಟಡ ಆದರೆ ಎರಡಂತಸ್ತಿನ ಮಸೀದಿಯಲ್ಲ. ಮೇಲಂತಸ್ತು ಪ್ರಾರ್ಥನಾ ಕೋಣೆಯಾದರೆ, ಕೆಳ ಅಂತಸ್ತು ವಿಶ್ರಾಂತಿ ತೆಗೆದುಕೊಳ್ಳುವ ಕೋಣೆಯಾಗಿದೆ. ಮಸೀದಿಯಲ್ಲಿ ಪ್ರವಚನ ಪೀಠವಿಲ್ಲವಾದ್ದರಿಂದ ಇದು ಎತ್ತರದ ಜಾಗದಲ್ಲಿದೆಯೆಂದು ಹೇಳಬಹುದು. ಇದು ಬಿಜಾಪುರದಲ್ಲಿ ನಿರ್ಮಿಸಲ್ಪಟ್ಟ ಅತ್ಯುತ್ತಮ ಮಸೀದಿ. ಆಗತ್ಯವಿರುವಷ್ಟು ಮಾತ್ರ ಅಲಂಕಾರದ ಕೆತ್ತನೆ ಇದೆ.





ಮೇಲ್ಛಾವಣಿಯ ದಕ್ಷಿಣ ತುದಿಯ ಮೇಲ್ಭಾಗದಲ್ಲಿ ಮೊದಲ ಹಂತದ ದಿಡ್ಡೀಗೋಡೆ ಅಥವಾ ರಕ್ಷಣಾ ಗೋಡೆಯಿದೆ. ಮಸೀದಿಯ ಗೋಡೆಯ ಹಿಂಭಾಗದಲ್ಲಿ ವಿಶಾಲವಾದ ಮಿಹ್ರಬ್ ಹಾಗೂ ಅಕ್ಕಪಕ್ಕಗಳಲ್ಲಿ ಚಿಕ್ಕದಾದ ಗೋಡೆ ಗೂಡಿದೆ. ಇದರ ಹಣ್ಣಿನ ಆಕಾರದ ಗುಮ್ಮಟವು ಬಿಜಾಪುರದಲ್ಲಿ ಕಾಣಸಿಗುವುದು ಅಪರೂಪ. ಕಟ್ಟಡದ ತುದಿಯಲ್ಲಿನ ಕೈಪಿಡಿ ಗೋಡೆಯು ಜಾಲರಿ ಹೆಣೆದಂತಿದ್ದು ಕಟ್ಟಡದ ತುರಾಯಿಯಂತೆ ಅಲಂಕೃತಗೊಂಡಿದೆ. ಮೇಲಂತಸ್ತು ಬಹಳಷ್ಟು ಅಲಂಕೃತಗೊಂಡಿದ್ದರೆ ಕೆಳ ಅಂತಸ್ತು ಸರಳತೆಯಿಂದ ಕೂಡಿದೆ.

ಪ್ರವೇಶ ದ್ವಾರದ ಸುತ್ತಲೂ ಇರುವ ಉದ್ದನೆಯ ಪರ್ಷಿಯನ್ ಶಾಸನವು, ಈ ಮಸೀದಿಯು 1608ರಲ್ಲಿ ಎರಡನೇ ಇಬ್ರಾಹಿಂ ಆದಿಲ್‌ಷಾನ ಹಾಗೂ ಸುಲ್ತಾನ್ ಮಹಮ್ಮದನ ಅಧಿಕಾರಿಯಾದ ಎತ್ತ್‌ಬರ್ ಖಾನ್‌ನಿಂದ ನಿರ್ಮಿಸಲ್ಪಟ್ಟಿತ್ತೆಂದು ದಾಖಲಿಸಿದೆ. ಇದರ ಗುಮ್ಮಟ ಮೊಟ್ಟೆ ಆಕಾರದಲ್ಲಿರುವುದರಿಂದ ಇದಕ್ಕೆ ಅಂಡೂ ಮಸೀದಿ ಎಂದು ಕರೆಯಲಾಗಿದೆ.

# ಗೋರಿಗಳು



## ಷಾಹ ನವಾಜ಼್‌ಖಾನನ ಸಮಾಧಿ


ಇದನ್ನು ಬಾರಾಟಾಂಗ್ ಮಸೀದಿ ಎಂದೂ ಕರೆಯಲಾಗುತ್ತದೆ. ಇದು ಷೋಲಾಪುರ ರಸ್ತೆಯ ಪಶ್ಚಿಮಕ್ಕೆ, ಅಂದರೆ ದರ್ಗಾ ಮತ್ತು ಕೇಂದ್ರ ಕಾರಾಗೃಹಕ್ಕೆ ಹೋಗುವ ರಸ್ತೆಯಲ್ಲಿದೆ. ಇದು ಎತ್ತರದಿಂದ ಕೂಡಿದ ದೊಡ್ಡ ಕಟ್ಟಡವಾಗಿದ್ದು



ಇದರ ಎದುರಿಗೆ ಮಸೀದಿಯಿದೆ. ಸಮಾಧಿಯು 66 ಚದರ ಅಡಿಗಳ ಜಗಲಿ (ಜಗತಿ) ಮೇಲಿದೆ. ಸ್ಮಾರಕದ ಮಧ್ಯೆ ಹಸಿರು ಬಣ್ಣದ ಕಲ್ಲಿನ ಗೋರಿಯಿದೆ. ಎತ್ತರದ ಜಗಲಿ, ಅಲಂಕೃತ ಒಳಭಾಗ ಹಾಗೂ ಕಮಾನುಗಳು ಸ್ಮಾರಕಕ್ಕೆ ಮೆರುಗನ್ನು ನೀಡಿವೆ.

## ಗೋಳ ಗುಮ್ಮಟ (ಗೋಲ್ ಗುಂಬಜ಼್)


ರೈಲು ನಿಲ್ದಾಣದಿಂದ ಅರ್ಧ ಕಿ.ಮೀ. ಪಶ್ಚಿಮಕ್ಕೆ ಇರುವ ಗೋಳ ಗುಮ್ಮಟ ಬಿಜಾಪುರದ ಎಲ್ಲ ಕಟ್ಟಡಗಳನ್ನೂ ಮೀರಿಸುವಂತಹುದು ಹಾಗೂ ಸುತ್ತಲೂ ಮೈಲಿಗಳ ತನಕ ಪ್ರಭುತ್ವ ಸ್ಥಾಪಿಸುವ ಸುಂದರ ನೋಟವನ್ನು ಒದಗಿಸುತ್ತದೆ. ಇದರ ಆಕಾರವನ್ನು ಭಾರತದ ಕೆಲವೇ ಕಟ್ಟಡಗಳಿಗೆ ಹೋಲಿಸಬಹುದು. ಇದರ ಉನ್ನತವಾದ ಪ್ರಮಾಣ ಹಾಗೂ ಅದ್ವಿತೀಯವಾದ ಗುಮ್ಮಟವನ್ನು ದೂರದಿಂದಲೇ ಪೂರ್ತಿಯಾಗಿ ಕಾಣಬಹುದು. ಈ ಬೃಹತ್ ಸಮಾಧಿ ಭವನವು ಅಸರ್ ಮಹಲ್‌ನ ಮೇಲಿನ ಹಜಾರದಿಂದ ನೋಡಿದಾಗ ಅದ್ಭುತವಾಗಿ ಕಾಣುತ್ತದೆ. ಒಂದನೆಯ ಇಬ್ರಾಹಿಂ ಅಲಂಕಾರದಿಂದ ಮತ್ತು ಶ್ರೀಮಂತಿಕೆಯ ಗಾಂಭೀರ್ಯದಿಂದ ಕೂಡಿದ ಸುಂದರವಾದ ಇಬ್ರಾಹಿಂ ರೋಜ಼ಾವನ್ನು ನಿರ್ಮಿಸಿದ. ಅಂತಹ ಕಟ್ಟಡ ಮತ್ತೆ ಬಂದಿರಲಿಲ್ಲ. ಅದರಂತೆ ನಿರ್ಮಿಸಲು ಸಾಧ್ಯವಿಲ್ಲವೆಂದರಿತ




ಮಹಮದ್, ಅದಕ್ಕಿಂತ ವಿಭಿನ್ನವಾದ ಶೈಲಿಯಲ್ಲಿ ರೋಜ್ಹಾವನ್ನು ಕಿರಿದಾಗುವಂತೆ ಮಾಡಲು ಈ ಬೃಹತ್ ಕಟ್ಟಡದ ನಿರ್ಮಾಣಕ್ಕೆ ಕೈಹಾಕಿದ.


ಇವೆರಡರಲ್ಲಿನ ವಿಭಿನ್ನತೆಯೆಂದರೆ, ಗೋಳ ಗುಮ್ಮಟ ಶಕ್ತಿಯುತ ಪುರುಷತ್ವದ ಕಲ್ಪನೆಯಾದರೆ, ರೋಜ್ಹಾ ನಯವಾದ ಸ್ತ್ರೀ ಲಕ್ಷಣದ ಪ್ರತೀಕವಾಗಿದೆ. ಆದಾಗ್ಯೂ, ಗೋಳ ಗುಮ್ಮಟ ಮಸೀದಿಯ ಜೊತೆಗೆ, ನಗರ್‌ಖಾನಾ, ಪ್ರವೇಶದ್ವಾರ, ವಿಶ್ರಾಂತಿಗೃಹ ಮತ್ತು ಇತರೆ ಸೌಲಭ್ಯಗಳಿಂದ ಕೂಡಿದ ಸಾಮ್ರಾಟರ ಸಮಾಧಿಯಾಗಿದ್ದು ವಾಸ್ತುಕಲೆಯಲ್ಲಿ ಅದ್ವಿತೀಯ ಆವರಣದಲ್ಲಿದೆ. ಇದು ಅದರ ವೈಶಿಷ್ಟ್ಯ.

ಗೋಳ ಗುಮ್ಮಟ ಸರಳವಾದ ಕಟ್ಟಡ. ಇದರ ಚೌಕಾಕಾರದ ಸಭಾಂಗಣ, ನಾಲ್ಕು ಬೃಹತ್ ಗೋಡೆಗಳಿಂದ ಆವೃತವಾಗಿದ್ದು ಮೂಲೆಗಳಲ್ಲಿ ಅಷ್ಟ ಕೋನಾಕೃತಿಯ ಗೋಪುರಗಳನ್ನು ಹೊಂದಿದ್ದು ಇವೆಲ್ಲ ಅರ್ಧ ವೃತ್ತಾಕಾರದ ಗುಮ್ಮಟದಿಂದ ಆವೃತವಾಗಿವೆ.





ಅಡ್ಡಛೇದ ವಿನ್ಯಾಸ



ತಳ ವಿನ್ಯಾಸ

ಒಂಭತ್ತು ಅಡಿ ದಪ್ಪವಿರುವ ಚೌಕದ ನಾಲ್ಕೂ ಕಡೆ ಕಲ್ಲಿನಿಂದ ಕಟ್ಟಿದ್ದು, ಅವು 100 ಅಡಿಗಳಷ್ಟು ಎತ್ತರವಿದೆ. ಚೌಕದ ಪ್ರತಿ ಮೂಲೆಯ ಹೊರಭಾಗದಲ್ಲಿ ಅಷ್ಟ ಕೋನಾಕೃತಿಯ ಗೋಪುರವಿದ್ದು ಇದು ಏಳು ಅಂತಸ್ತುಗಳನ್ನು ಹೊಂದಿದೆ. ಪ್ರತಿಯೊಂದು ಅಂತಸ್ತಿನ ಹೊರಮುಖವು ಸಲಾಕಿಗಳ ಆಕಾರದ ಕಿಟಕಿಗಳನ್ನು ಹೊಂದಿದೆ. ಹೊರಭಾಗದ ಅಡಿಯಲ್ಲಿ ಕಟ್ಟಡದ ಸುತ್ತ ಜಗಲಿಯಿದೆ ಹಾಗೂ ಅದು ಕಲ್ಲಿನ ಕೈಪಿಡಿ ಗೋಡೆಯಿಂದ ರಕ್ಷಣೆ ಪಡೆದಿದೆ. ಜಗಲಿಯಿಂದ ಕೆಲವು ಹೆಜ್ಜೆ ಹತ್ತಿದರೆ, ಕಟ್ಟಡದ ಪ್ರತಿ ಮೂಲೆಯಲ್ಲಿನ ಬಾಗಿಲ ಮೂಲಕ ಗುಮ್ಮಟದ ಒಳಭಾಗಕ್ಕೆ ಪ್ರವೇಶಿಸಬಹುದು. ಗೋಡೆಗಳು ಮತ್ತು ಕೈಪಿಡಿ ಗೋಡೆಗಳ ಕಮಾನುಗಳ ಮೇಲ್ಭಾಗದ ನಡುವಿನ ಕಟ್ಟಡದ ಸುತ್ತಲಿರುವ ಸದೃಢವಾದ ಛಾವಣಿಯ ಮೇಲಿನ ಅಲಂಕಾರ ಗಮನಿಸಬೇಕಾದ ಅಂಶವಾಗಿದೆ. ಇದು ಬಿಜಾಪುರ ದಲ್ಲಿರುವ ಅದ್ವಿತೀಯ ಹಾಗೂ ದೇಶದಲ್ಲೇ ಚಮತ್ಕಾರದ ಕೆಲಸದಿಂದ ಕೂಡಿದ ಒಂದು ಕಟ್ಟಡ. ಸಭಾಂಗಣದ ಒಳಭಾಗ 135 ಅಡಿಗಳ ವ್ಯಾಸ ಹಾಗೂ 178 ಅಡಿ ಎತ್ತರದಿಂದ ಕೂಡಿದೆ. ಒಟ್ಟಾರೆ ಇದರ ಒಳಭಾಗದ ವಿಸ್ತೀರ್ಣವು
18000 ಚದರಡಿಗಳಷ್ಟಿದೆ. ಈ ಲೆಕ್ಕಾಚಾರದ ಪ್ರಕಾರ ಇದು
15833 ಚದರಡಿ ವಿಸ್ತಾರವನ್ನು ಹೊಂದಿರುವ ರೋಂನ ಸರ್ವದೇವ ಸಭೆಯ ಕಟ್ಟಡಕ್ಕಿಂತ ವಿಶಾಲವಾದುದು.

ಗೋಳ ಗುಮ್ಮಟದ ಇನ್ನೊಂದು ಪ್ರಮುಖ ಲಕ್ಷಣವೆಂದರೆ, ಗುಮ್ಮಟದ ಒಳಭಾಗದಲ್ಲಿನ ಪಿಸುಗುಟ್ಟುವ ಉಪ್ಪರಿಗೆ. ಗುಮ್ಮಟದ ತಳಭಾಗ ಸುತ್ತ ಇರುವ ಎಂಟು ಚಿಕ್ಕ ದ್ವಾರಗಳ ಮೂಲಕ ಮೇಲ್ಛಾವಣಿಯಿಂದ ಇದರೊಳಕ್ಕೆ ಹೋಗಬಹುದು.

ಗೋಳ ಗುಮ್ಮಟ ಒಳಕ್ಕೆ ಪ್ರವೇಶಿಸುತ್ತಿದ್ದಂತೆ, ಪ್ರವಾಸಿಗರ ಜೋರಾದ ಪ್ರತಿಧ್ವನಿಯನ್ನು ಕೇಳಬಹುದು. ಉಪ್ಪರಿಗೆ ಹೋಗುತ್ತಿದ್ದಂತೆ ಈ



ಪ್ರತಿಧ್ವನಿಯ ಶಬ್ದ ಹೆಚ್ಚಾಗುತ್ತದೆ ಸಣ್ಣ ಪಿಸುಮಾತು ಕೂಡ ಉಪ್ಪರಿಗೆಯ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಕೇಳಿಸುತ್ತದೆ. ನಿಶ್ಶಬ್ದ ಸ್ಥಿತಿಯಲ್ಲಿ ಪ್ರತಿಧ್ವನಿಯು ಅನೇಕ ಬಾರಿ ಕೇಳಿಸುತ್ತದೆ.

ಗುಮ್ಮಟ ಮಧ್ಯಭಾಗದಲ್ಲಿ ಎತ್ತರವಾದ ಜಗಲಿಯಿದ್ದು, ಅದರ ಮೇಲೆ ಸುಲ್ತಾನ್ ಮಹಮ್ಮದನ ಮೊಮ್ಮಗ, ಮಹಮ್ಮದನ ಕಿರಿಯ ಹೆಂಡತಿ, ಸುಲ್ತಾನ ಹಾಗೂ ಅವನ ಪ್ರೀತಿ ಪಾತ್ರಳಾಗಿದ್ದ ರಂಭಾ ಆತನ ಮಗಳು ಹಾಗೂ ಹಿರಿಯ ಪತ್ನಿಯ ಅನುಕರಣೆಯ ಗೋರಿಗಳಿವೆ. ಆದರೆ ಇವರುಗಳ ನಿಜವಾದ ಸಮಾಧಿಗಳು ಕೆಳಗಿನ ನೆಲಮಾಳಿಗೆಯಲ್ಲಿವೆ. ಈ ಮಹಾ ಸಮಾಧಿ ಮಂದಿರದ ಪಶ್ಚಿಮಕ್ಕೆ ಗುಮ್ಮಟದಿಂದ ಕೂಡಿದ ಮಸೀದಿಯಿದೆ. ಇದು ಒಳ್ಳೆಯ ಪ್ರಮಾಣದಲ್ಲಿ ಕಟ್ಟಿದ ಬೃಹತ್ ಕಟ್ಟಡವಾಗಿದ್ದು ತೆಳುವಾದ ಮಿನಾರ್‌ಗಳು ಮತ್ತು ಛಾವಣಿಯ ಕೆಳಭಾಗದಲ್ಲಿ ಸುಂದರ ಕೆತ್ತನೆಗಳಿವೆ. ಇತಿಹಾಸಕಾರ ಪರ್ಸಿಬ್ರೌನ್ ಪ್ರಕಾರ, ಗೋಲ್‌ಗುಂಬಜ್ (ಗೋಳ ಗುಮ್ಮಟ) ಅದರ ಅದ್ಭುತವಾದ ಸಮಕಟ್ಟಿನ ನಿರ್ಮಾಣದಿಂದಾಗಿ, ಅದು ಭಾರತೀಯ ಶಿಲ್ಪಿಯ ನಿರ್ಮಾಣಗಳಲ್ಲಿ ಅತ್ಯುತ್ತಮವಾದುದು ಎಂಬ ವಿಷಯ ಪ್ರಶ್ನಾತೀತವಾದುದು.

ಗೋಳ ಗುಮ್ಮಟ ಎದುರುಗಡೆ ಇರುವ ನಗರ್ ಖಾನಾ ಈಗ ವಸ್ತು ಸಂಗ್ರಹಾಲಯವಾಗಿ ಮಾರ್ಪಟ್ಟಿದ್ದು, ಇದೂ ಸಹ ಒಂದು ಆಕರ್ಷಣೀಯ ಕಟ್ಟಡ. ಈ ಸಂಗ್ರಹಾಲಯದಲ್ಲಿ ಶಿಲ್ಪಗಳು, ಹಸ್ತಪ್ರತಿಗಳು, ವರ್ಣಚಿತ್ರಗಳು, ಪರ್ಷಿಯನ್ ಮತ್ತು ಅರೇಬಿಕ್ ಹಸ್ತಾಕ್ಷರಗಳು, ನಾಣ್ಯಗಳು, ಶಸ್ತ್ರಾಸ್ತ್ರಗಳು ಮುಂತಾದವುಗಳ ಅಧಿಕ ಪ್ರಮಾಣದ ಸಂಗ್ರಹವಿದೆ. ಗೋಳ ಗುಮ್ಮಟದ ಸುತ್ತಮುತ್ತ ಪೂರ್ತಿ ಜಾಗವನ್ನು ದಕ್ಷಿಣ ಭಾರತದ ಅಪರೂಪದ ಮಧ್ಯಕಾಲೀನ ಸ್ಮಾರಕವನ್ನು ಸ್ವಾಭಾವಿಕವಾಗಿ ಕಾಣುವಂತೆ ಕಾಪಾಡಲಾಗಿದೆ.


# ಇಬ್ರಾಹಿಂ ರೋಜಾ

ಎರಡನೆಯ ಇಬ್ರಾಹಿಂ ಆದಿಲ್‌ಷಾನ ಈ ಸಮಾಧಿಯನ್ನು ಡಾ॥ ಕಸೆನ್ಸ್ "ದಕ್ಷಿಣದ ತಾಜ್‌ಮಹಲ್" ಎಂದು ಕರೆದಿರುವುದು ಉಚಿತವಾಗಿದೆ. ಎತ್ತರದ ಜಗಲಿಯ ಮೇಲೆ, ಕಮಾನುಗಳ ಸಾಲಿನ ಆಧಾರ ಪಡೆದಿರುವ ಇದು ಅವಳಿ ಕಟ್ಟಡಗಳನ್ನು ಹೊಂದಿದೆ. ಒಂದು ಪ್ರಾರ್ಥನಾ ಮಂದಿರವಾದರೆ (ಮಸೀದಿ) ಇನ್ನೊಂದು ಗೋರಿಯಾಗಿದೆ. ವಿಶಾಲವಾದ ಖಾಲಿ ಜಾಗದ ಎರಡೂ ಕಡೆ ಒಂದಕ್ಕೊಂದು ಮುಖಮಾಡಿ ನಿಂತಿರುವ ಈ ಕಟ್ಟಡಗಳು ಚೌಕಾಕಾರದಲ್ಲಿದ್ದು ಮೂಲೆಗಳಲ್ಲಿ ಮಿನಾರ್‌ಗಳನ್ನು ಹೊಂದಿವೆ. ಮಧ್ಯಭಾಗದಲ್ಲಿ ದುಂಡನೆಯ ಗುಮ್ಮಟವಿದ್ದು ಮೇಲ್ಭಾಗದಲ್ಲಿ ಕಳಸದಂತಹ ವಿನ್ಯಾಸವಿದೆ. ಗುಮ್ಮಟವು ತಾವರೆಯ ದಳಗಳ ಮೇಲೆ ಎದ್ದುನಿಂತಂತಿದೆ.

ಗೋರಿಗಳ ಮಧ್ಯಭಾಗದ ಗೋಡೆಗಳು ಮತ್ತು ಕಂಬಗಳು ಲಿಪಿಗಳು, ಪುಷ್ಪಗಳು ಮತ್ತು ಜ್ಯಾಮಿತಿಯ ರೇಖಾ ಚಿತ್ರಗಳಿಂದ ಅಲಂಕರಿಸಲ್ಪಟ್ಟಿವೆ.

ಇದರ ಇಡೀ ವಿನ್ಯಾಸ "ಕಲಾ ಪ್ರೇಮಿಯ ಕಣ್ಣುಗಳನ್ನು ಸೆರೆಹಿಡಿದು ಅವಕ್ಕೆ ಹಬ್ಬವನ್ನುಂಟು ಮಾಡುತ್ತದೆ". ಅದರ ತೇಜಸ್ಸಿಗೆ "ಸರಿದೂಗುವಂತಹುದು ಪ್ರಪಂಚದ ಯಾವುದೇ ಭಾಗದಲ್ಲಿ ಸಿಗುವುದು ಕಷ್ಟ" ಇಬ್ರಾಹಿಂ ರೋಜಾವನ್ನು 'ಕಪ್ಪು ತಾಜ್‌ಮಹಲ್' ಎಂದೂ ಕರೆಯಲಾಗುತ್ತದೆ.






ಈ ಮಹಾ ಸಮಾಧಿಯ ಒಳಾಂಗಣದಲ್ಲಿ ಇಬ್ರಾಹಿಂ ಆದಿಲ್‌ಷಾ, ಆತನ ರಾಣಿ ತಾಜ್ ಸುಲ್ತಾನ ಹಾಗೂ ಅವರ ಕುಟುಂಬದ ಸದಸ್ಯರ ಸಮಾಧಿಗಳಿವೆ.




# ಜೋಡ್ ಗುಂಬಜ್

ತಾಜ್ ಬವಡಿಯ ಪೂರ್ವಕ್ಕೆ 200 ಮೀ. ದೂರದಲ್ಲಿ ಎರಡು ಗುಮ್ಮಟಗಳಿರುವ ಕಟ್ಟಡ ಸಮುಚ್ಛಯವಿದೆ. ಇದನ್ನು "ಇಬ್ಬರು ಸಹೋದರಿಯರು'' ಅಥವಾ "ಜೋಡ್ ಗುಂಬಜ್'' ಎಂದು ಕರೆಯುವರು.

ಇವು ಎರಡನೇ ಆದಿಲ್ ಷಾಹನ ಸೇನಾಧಿಕಾರಿ ಖಾನ್ ಮಹಮದ್ ಹಾಗೂ ಅವನ ಧಾರ್ಮಿಕ ಗುರು ಅಬ್ದುಲ್ ರಜ್ಜಾಕನ ಗೋರಿಗಳಾಗಿವೆ. ಈ ಧಾರ್ಮಿಕ ಗುರು ಮತ್ತು ಸಂತನ ದರ್ಗಾವನ್ನು ಆತನ ಶಿಷ್ಯ



ಅರ್ಧಛೇದ ವಿನ್ಯಾಸ



ಖಾನ್ ಮಹಮದ್ ನಿರ್ಮಿಸಿದ್ದು ವಿಶಾಲವಾಗಿ ಸಹಜತೆಯಿಂದ ಕೂಡಿದೆ. ಇದು ಸರಳವಾದ ಚೌಕಾ ಕೃತಿಯ ಕಟ್ಟಡವಾಗಿದ್ದು ನೆಲಮಾಳಿಗೆಯಲ್ಲಿ ಸಮಾಧಿಯನ್ನು ಹೊಂದಿರುವ ಇದು ಯಾವುದೇ ಅಲಂಕಾರವಿಲ್ಲದ ಗುಮ್ಮಟದಿಂದ ಸುತ್ತುವರೆದಿದೆ. ಇದನ್ನು ಬಿಜಾಪುರದ ಮುಸಲ್ಮಾನರು ಬಹಳ ಗೌರವದಿಂದ ಕಾಣುವರು.

ಅಬ್ದುಲ್ ರಜ್ಜಾಕ್ ಖಾದ್ರಿಯ ಸಮಾಧಿಯ ದಕ್ಷಿಣಕ್ಕಿರುವ ಅಷ್ಟಕೋನಾಕೃತಿಯ ಕಟ್ಟಡವು ಖಾನ್ ಮಹಮದ್ ಹಾಗೂ ಅವನ ಮಗ ಖಿವಾಸ್ ಖಾನನ ವಿಶ್ರಾಂತಿ ಗೃಹವಾಗಿತ್ತು. ಇವರನ್ನು ರಾಜದ್ರೋಹದ ಆರೋಪದ ಮೇರೆಗೆ ಕೊಲ್ಲಲಾಯಿತು. ಈ ಸ್ಮಾರಕಗಳ ಸುತ್ತಲೂ ವಿಸ್ತಾರವಾದ ಒಳ್ಳೆಯ ತೋಟವಿದೆ.

ಅಮವಾಸ್ಯೆಯಂದು ಅಧಿಕ ಸಂಖ್ಯೆಯಲ್ಲಿ ಭಕ್ತಾದಿಗಳು ಇಲ್ಲಿ ಸೇರುತ್ತಾರೆ.


## ದೆವ್ವ ಹುಣಸಿ ಮರ

ದೆವ್ವ ಹುಣಸಿ ಅಥವಾ ಅಡೆನ್ ಸೋನಿಯಾ ಡಿಜಿಟಾಟಾ ಜಾತಿಯ ಮರಗಳು ಓಗಾಪುರ್ ಮಸೀದಿ ಮತ್ತು ಇಬ್ರಾಹಿಂ ರೋಜ್ಹಾದ ಬಳಿ ಇವೆ. ಇವು ಆದಿಲ್‌ಷಾಹಿಗಳ ಕಾಲದ್ದಾಗಿದ್ದು ಔಷಧೀಯ ಗುಣಗಳನ್ನು ಹೊಂದಿವೆಯೆಂದು ಹೇಳಲಾಗಿದೆ. ಇವುಗಳ ಎಲೆಗಳು ಮತ್ತು ವಿಚಿತ್ರ ಆಕಾರದ ಹಣ್ಣುಗಳನ್ನು ಹಿಂದಿನಿಂದಲೂ ಸಸ್ಯೌಷಧಿಗಳನ್ನು ತಯಾರಿಸಲು ಉಪಯೋಗಿಸಲಾಗುತ್ತಿದೆ.



## ಎರಡನೇ ಅಲಿಆದಿಲ್ ಷಾನ ಸಮಾಧಿ (ಬಾರಾ ಕಮಾನ್)


ನಗರದ ಮಧ್ಯಭಾಗದಲ್ಲಿ ರಾಜಪ್ರಾಂಗಣಕ್ಕೆ ವಾಯುವ್ಯ ದಿಕ್ಕಿನಲ್ಲಿರುವ ವಿಶಾಲವಾದ ಚೌಕಾಕೃತಿಯ ಛಾವಣಿ ರಹಿತ ಹಾಗೂ ಅಪೂರ್ಣವಾದ ಕಮಾನುಗಳಿಂದ ಕೂಡಿದ ಕಂದು ಬಣ್ಣದ ಅಗ್ನಿಶಿಲೆಯ ಕಟ್ಟಡವೇ ಎರಡನೆಯ ಆದಿಲ್‌ಷಾನ (1656-72) ಸಮಾಧಿ. ಪ್ರಾಯಶಃ ಇದನ್ನು ಅವನು ಸಿಂಹಾಸನವೇರಿದಾಗ ಕಟ್ಟಲು ಪ್ರಾರಂಭಿಸಿದ್ದು. ಆತನ ತಂದೆ ಮಹಮದ್ ಆದಿಲ್‌ಷಾನ ಸ್ಮಾರಕ ಗೋಲ್ ಗುಂಬಜ್‌ನ್ನು ಮೀರಿಸುವಂತೆ ಬೃಹತ್ ಪ್ರಮಾಣದಲ್ಲಿ ನಿರ್ಮಿಸಲು ಯೋಜಿಸಿದ್ದರೂ ಅದು ಪೂರ್ತಿಗೊಳ್ಳಲಿಲ್ಲ. ಎತ್ತರವಾದ ಬುನಾದಿಯ ಮೇಲೆ ನಿಂತಿರುವ ಕಟ್ಟಡ 215 ಅಡಿಗಳ ಚೌಕಾಕಾರವನ್ನು ಹೊಂದಿದೆ. ಇಲ್ಲಿ ಎರಡನೇ ಆದಿಲ್‌ಷಾ ಮತ್ತು ಅವನ ಕೆಲ ಕುಟುಂಬದ ಸದಸ್ಯರ ಸಮಾಧಿ ಕಲ್ಲುಗಳಿದ್ದರೂ



ನಿಜವಾದ ಸಮಾಧಿಗಳು ನೆಲಮಾಳಿಗೆಯಲ್ಲಿದ್ದು ಅವನ್ನು ಪೂರ್ವದಿಕ್ಕಿನಲ್ಲಿರುವ ಬಾಗಿಲಿನಿಂದ ಪ್ರವೇಶಿಸಬಹುದಾಗಿದೆ.


ಇಡೀ ಕಟ್ಟಡವು ಭದ್ರವಾದ ಅಡಿಪಾಯವನ್ನು ಹೊಂದಿದ್ದು ಒಂದು ವೇಳೆ ಪೂರ್ಣಗೊಂಡಿದ್ದರೆ, ಅದು ಬಿಜಾಪುರದಲ್ಲಿನ ಅತ್ಯಂತ ಆಕರ್ಷಕ ಸ್ಮಾರಕವಾಗುತ್ತಿತ್ತು. 300 ವರ್ಷಗಳ ಕಾಲ ಇದು ಬಿಸಿಲು ಮಳೆಗಳ ಹೊಡೆತಕ್ಕೆ ಸಿಕ್ಕಿದರೂ, ಇದರ ಕಮಾನುಗಳು ಸುರಕ್ಷಿತವಾಗಿವೆ. ಇದರಿಂದ ಅಂದಿನ ಶಿಲ್ಪಿಗಳ ನಿರ್ಮಿತಿ ಕೌಶಲ್ಯದ ಪ್ರತಿಭೆಯನ್ನು ತಿಳಿಯಬಹುದು. ಈ ಕಟ್ಟಡವು ನಗರದ ಹಾಳು ಬಿದ್ದ ಕಟ್ಟಡಗಳಲ್ಲಿ ಒಂದಾಗಿದೆ.

ಬಿಜಾಪುರ ನಗರದೆಲ್ಲೆಡೆ ಹಲವಾರು ಸಣ್ಣ ಪುಟ್ಟ ಗುಮ್ಮಟಗಳಿವೆ. ಆ ಪೈಕಿ ನೌ (ಒಂಭತ್ತು) ಗುಂಬಜ್ ಮತ್ತು ಮೋತಿ ಗುಂಬಜ್ ಮಸೀದಿಗಳು ಮುಖ್ಯವಾದುವು.




## ಹಾಸಿಂ ಪೀರ್ ದರ್ಗಾ

ಹಝರತ್ ಹಾಸಿಂ ಪೀರ್ ಬಿಜಾಪುರದ ಪ್ರಮುಖ ಸೂಫಿ ಸಂತರಲ್ಲಿ ಒಬ್ಬರು (1575-1646) ಷಾ ಬುರಾನುದ್ದೀನನ ಮಗನಾದ ಷಟ್ಟಾರಿ ಸೂಫಿ ಬಾಲ್ಯವನ್ನು ಅಹಮದಾಬಾದಿನಲ್ಲಿ ಕಳೆದ ಅಲ್ಲಿಂದ ಆತ ಸೌದಿ ಅರೇಬಿಯಾಗೆ ಹೋಗಿ, 1612ರಲ್ಲಿ ಎರಡನೆಯ ಇಬ್ರಾಹಿಂ ಆದಿಲ್‌ಷಾನ ಕಾಲದಲ್ಲಿ ಬಿಜಾಪುರಕ್ಕೆ ಬಂದನು. ಮಹಮ್ಮದ್ ಆದಿಲ್‌ಷಾ ಸಹ ಈ ಹಾಸಿಂ ಪೀರರ ಅನುಯಾಯಿಯಾಗಿದ್ದ. ಮಹಮ್ಮದ್ ಆದಿಲ ಷಾಹನು ಖಾಯಿಲೆಯಿಂದ ಮರಣಾವಸ್ಥೆಗೆ ಬಂದಿದ್ದಾಗ 1646ರಲ್ಲಿ ಅವನಿಗೆ



ಹಾಸಿಂ ಪೀರ್ ಹತ್ತು ವರ್ಷಗಳ (1646-1656) ಆಯುಷ್ಯವನ್ನು ಕೊಟ್ಟನೆಂದು ಹೇಳಲಾಗಿದೆ. ಆಗಿನ್ನೂ ಗೋಲ್ ಗುಂಬಜ್ ಪೂರ್ಣಗೊಂಡಿರಲಿಲ್ಲ. 1656ರಲ್ಲಿ ಅದರ ನಿರ್ಮಾಣ ಪೂರ್ಣಗೊಂಡ ನಂತರ ಮಹಮದ್ ಆದಿಲ್‌ಷಾ ಮೃತನಾದ.


ಹಾಸಿಂ ಪೀರ್ ಕೋಮು ಸಾಮರಸ್ಯದ ಪ್ರತೀಕ ಈಗಲೂ ಎಲ್ಲ ಜನಾಂಗದವರು ಈ ದರ್ಗಾದಲ್ಲಿ ಪೂಜೆ ಸಲ್ಲಿಸುತ್ತಾರೆ. ಈ ದರ್ಗಾ ಗೋಲ್ ಗುಂಬಜ್‌ನ ಪಶ್ಚಿಮಕ್ಕಿದೆ.



# ಅರಮನೆಗಳು


## ಗಗನ್ ಮಹಲ್

"ಗಗನ್‌ಮಹಲ್ ಅಥವಾ ಆಕಾಶದ ಅರಮನೆ" ಯನ್ನು ಸುಲ್ತಾನರ ನಿವಾಸ ಹಾಗೂ ದರ್ಬಾರ್ ಹಾಲ್‌ಗಾಗಿ 1561ರಲ್ಲಿ ಆಲಿ ಆದಿಲ್‌ಷಾ ಕಟ್ಟಿಸಿದ. ಆಯತಾಕಾರದಲ್ಲಿರುವ ಕಟ್ಟಡವು 124 X 81 ಅಡಿ ವಿಸ್ತಾರವಾಗಿದ್ದು. ಉನ್ನತವಾದ ದರ್ಬಾರ್ ನಡೆಸುವ ಜಗತಿ ಹೊಂದಿದ್ದು ಉತ್ತರಭಾಗದಲ್ಲಿ ಪೂರ್ತಿ ತೆರೆಯಲ್ಪಟ್ಟಿದೆ. ಈ ಸಭಾಂಗಣದ ಪೂರ್ವ ಪಶ್ಚಿಮಗಳಲ್ಲಿ ಚಿಕ್ಕ ಕೊಠಡಿಗಳಿವೆ. ಮೇಲಂತಸ್ತಿಗೆ ಹೋಗಲು ಮೆಟ್ಟಲುಗಳಿದ್ದು. ಅಲ್ಲಿ ರಾಜ ಕುಟುಂಬಗಳಿಗೆ ವಾಸ್ತವ್ಯ ಒದಗಿಸಲಾಗಿತ್ತು. ಸಭಾಂಗಣದ ಎಲ್ಲ ಕಡೆಗಳಲ್ಲಿ ಉಬ್ಬಿದ ಸುಂದರವಾದ ಕೈಸಾಲೆಗಳಿದ್ದು ಇಳಿಬಿಟ್ಟ ಪರದೆಗಳ ಹಿಂದೆ ಕುಳಿತು ದರ್ಬಾರನ್ನು ವೀಕ್ಷಿಸಲು ರಾಣಿವಾಸದವರಿಗೆ ಅವಕಾಶ ಕಲ್ಪಿಸಲಾಗಿತ್ತು. ಕೈಸಾಲೆಗಳು ಮತ್ತು ಕಿಟಕಿಗಳ ತುಂಬಾ ಕೆತ್ತನೆಗಳಿದ್ದು, ಬಣ್ಣಗಳಿಂದ ಅಲಂಕರಿಸಲಾಗಿದೆ. ಅಲ್ಲದೆ, ಛಾವಣಿ ಹಾಗೂ ಕಂಬಗಳು ಮರಗೆಲಸದಿಂದ ಕೂಡಿದ್ದು ಚಿನ್ನದ ಲೇಪದಿಂದ ಕಂಗೊಳಿಸುತ್ತಿದೆ. ಈ ಕಟ್ಟಡವು ಚರಿತ್ರೆಯಲ್ಲಿ ದಾಖಲಾಗಿರುವ ಅನೇಕ ಮಹತ್ವದ, ಕೆಲವೊಮ್ಮೆ ದುಃಖ ಪೂರಿತ ಘಟನೆಗಳಿಗೆ ಸಾಕ್ಷಿಯಾಗಿದೆ.



ಎಲ್ಲ ಕಡೆಗಳಿಂದ ಪಿತೂರಿ ಮತ್ತು ಗುಂಪುಗಾರಿಕೆ ಇದ್ದ ಸಂದರ್ಭದಲ್ಲಿ ಚಾಂದ್‌ಬೀಬಿಯು ಇಲ್ಲಿಯೇ ಆಡಳಿತವನ್ನು ನಡೆಸುತ್ತಿದ್ದುದು. ಇಲ್ಲಿಂದಲ್ಲೇ ದೇಶದ್ರೋಹಿ ಕಿಷ್ವರ್ ಖಾನ್ ಈ ಗುಣವಂತ ರಾಣಿಯನ್ನು ಹೊರಗೆಳೆದು ತಂದು ಸತಾರಾದ ಜೈಲು ಕೋಣೆಯಲ್ಲಿ ಇರಿಸಿದ್ದು. ಅರಮನೆಯು ಆದಿಲ್‌ಷಾಹಿ ಸಾಮ್ರಾಜ್ಯದ ಕೀರ್ತಿ, ವೈಭವ, ಪ್ರೇಮ ಮತ್ತು ಪಿತೂರಿಗಳಿಗೆ ಸಾಕ್ಷಿಯಾದಂತೆ 1686ರಲ್ಲಿ ಮೌನ ಮತ್ತು ಶೋಕವನ್ನು ಕಾಣಬೇಕಾಯಿತು. ಆ ಘಟನೆಯೆಂದರೆ, ಔರಂಗಜೇಬನು ನಗರವನ್ನು ಆಕ್ರಮಿಸಿ, ವಿಜಯೋತ್ಸಾಹದಿಂದ ಇದೇ ದರ್ಬಾರ್ ಸಭಾಂಗಣದಲ್ಲಿ ಕುಳಿತು ಆದಿಲ್‌ಷಾಹಿಗಳ ಕೊನೆಯ ದೊರೆ ದುರದೃಷ್ಟವಂತ ಸಿಕಂದರ್‌ನನ್ನು ಬೆಳ್ಳಿಯ ಸಂಕೋಲೆಗಳಿಂದ ಬಂಧಿಸಿ ತನ್ನ ಎದುರು ಹಾಜರಾಗುವಂತೆ ಮಾಡಿ ಗಣ್ಯರಿಂದ ಅಧೀನತ್ವದ ಗೌರವ-ನಜ಼ರ್‌ಗಳನ್ನು ಪಡೆದ.

ದರ್ಬಾರ್ ಹಾಲಿನ ಎದುರಿನ ಇಡಿಭಾಗದಲ್ಲಿನ ಬೃಹತ್ ಕಮಾನು ಎತ್ತರದ ಜಗಲಿಯ ಮೇಲೆ ನಡೆಯುವ ಪ್ರಕ್ರಿಯೆಗಳನ್ನು  ವೀಕ್ಷಕರು ಪೂರ್ತಿಯಾಗಿ ಸುಲ್ತಾನನು, ಮಂತ್ರಿಗಳು ಮತ್ತು ಅಧಿಕಾರಿಗಳಿಂದ ಕೂಡಿ ಸಿಂಹಾಸನದ ಮೇಲೆ ಕುಳಿತಿರುವುದನ್ನು ಕಾಣುವಂತೆ ರಚಿಸಲ್ಪಟ್ಟಿವೆ.



## ಅದಾಲತ್ ಮಹಲ್

ಅದಾಲತ್ ಮಹಲ್ ಎಂದರೆ ನ್ಯಾಯ ಸಭಾಂಗಣ. ಮೊದಲು ಇದು ಎರಡಂತಸ್ತಿನಿಂದ ಕೂಡಿದ್ದು ದೊಡ್ಡ ಮರದ ಕಂಬಗಳು ಮತ್ತು ಅಗಲವಾದ ಮೊಗಸಾಲೆ ಹೊಂದಿತ್ತು. ಇದು ಹಾಳಾಗಲು ಪ್ರಾರಂಭಿಸಿದಾಗ, ಸತಾರದ ರಾಜ ಕೆಲವು ಭಾಗಗಳನ್ನು ತೆಗೆದು ಹಾಕಿದ.

ಕಟ್ಟಡವು ಹಾಳು ಬಿದ್ದ ಸಾಮಗ್ರಿಗಳ ಮೇಲಿನ ಅಸ್ಥಿ ಪಂಜರದಂದ್ದಿತು, ನಂತರ ರಾಜ್ಯದ ಉಪಯೋಗಕ್ಕಾಗಿ ವಾಸ ಗೃಹವನ್ನಾಗಿ ಮಾರ್ಪಡಿಸಲಾಯಿತು. ಈಗ ಇದನ್ನು ಜಿಲ್ಲಾಧಿಕಾರಿಗಳ ವಸತಿ ಗೃಹವನ್ನಾಗಿ



ಬಳಸಲಾಗುತ್ತಿದೆ. ಈಗ ಇದು ಎರಡಂತಸ್ತಿನ ಭವ್ಯ ಕಟ್ಟಡವಾಗಿದ್ದು ರಮಣೀಯವಾದ ಹಸಿರು ಮರಗಳಿಂದ ಸುತ್ತುವರಿದಿದೆ. ಇದರ ದಕ್ಷಿಣ ಭಾಗದಲ್ಲಿ ಆದಿಲ್ ಷಾಹಿಗಳ ಕಾಲದ ಚಿಲುಮೆಗಳು ಮತ್ತು ಉದ್ಯಾನದ ಗೋಡೆಗಳನ್ನು ಕಾಣಬಹುದಾಗಿದೆ.

ಈ ತೋಟದಾಚೆ ಉತ್ತರಭಾಗದಲ್ಲಿ ಔರಂಗಜೇಬನಿಂದ ನಿರ್ಮಿಸಲ್ಪಟ್ಟಿದ್ದೆಂದು ಹೇಳಲಾಗುವ ಮಸೀದಿಯಿದೆ. ಆದಾಲತ್ ಮಹಲ್‌ನಂತೆ ಇದ್ದ ಸೂರಜ್ ಮಹಲ್‌ನ್ನು ಈಗ ಸಿಬ್ಬಂದಿಯ ವಸತಿ ಗೃಹಗಳಾಗಿ ಪರಿವರ್ತಿಸಲಾಗಿದೆ.





## ಆನಂದ ಮಹಲ್

ಇದು ಬಿಜಾಪುರದಲ್ಲಿನ ಅತ್ಯಂತ ಸುಂದರ ಅರಮನೆ. ಇದನ್ನು ಎರಡನೆಯ ಇಬ್ರಾಹಿಂ ಕಟ್ಟಿಸಿದ. ತಾನು ಕಟ್ಟಿಸಿದ ಹೊಸ ಅರಮನೆಗೆ ಸಂತೋಷ-ಸಂಭ್ರಮಗಳಿಂದ ಬಂದುದನ್ನು ಫೆರಿಸ್ತಾ ಎಂಬ ಇತಿಹಾಸಕಾರ ವರ್ಣಿಸಿದ್ದಾನೆ. ಆಗ ನಗರವನ್ನು ಅದ್ಭುತವಾಗಿ ಅಲಂಕರಿಸಿ ಶ್ರೀಮಂತ ಜರತಾರಿ ವಸ್ತ್ರಗಳು ಮತ್ತು ತೋರಣಗಳನ್ನು ಅಲಿಪುರ ದ್ವಾರದಿಂದ ಇಳಿಬಿಡಲಾಗಿತ್ತು. ಇಬ್ರಾಹಿಂನು ಅಲಿಪುರ ದ್ವಾರದಿಂದ ಜಾಮಿ ಮಸೀದಿ ಮೂಲಕ ಜನರ ಗುಂಪಿನ ಜೈಕಾರಗಳೊಂದಿಗೆ ಮೆರವಣಿಗೆಯಲ್ಲಿ ಬರುತ್ತಾನೆ. ರಾತ್ರಿ ಆನಂದ ಮಹಲನ್ನು ಅಮೋಘವಾದ ರೀತಿಯಲ್ಲಿ ಬೆಳಕಿನಿಂದ ಅಲಂಕರಿಸಲಾಗಿತ್ತು. ಅದಕ್ಕೆ ಅಲಂಕೃತಗೊಂಡ ಗೋಡೆಗಳು, ಸುಂದರ ಕೋಣೆಗಳು, ವೈಭವದ ಸಭಾಂಗಣ ಅಷ್ಟೇ ಸುಂದರವಾದ ಅಂಗಳ ಚಿನ್ನದ ಲೇಪದಿಂದ ಕೂಡಿದ ಮೇಲ್ಛಾವಣಿಯಿಂದ ಕೂಡಿದ್ದು, ಅದರ ಮೂಲಕ ಅರಮನೆಯ ಸ್ತ್ರೀಯರು ಹೊರ ಪ್ರಪಂಚದ ದೃಶ್ಯಗಳನ್ನು



ಕಾಣುವಂತಿತ್ತು. ಛಾವಣಿಯ ಸುಂದರ ಕೆತ್ತನೆ ಕೆಲಸ, ಬಣ್ಣ ಬಳಿಯಲ್ಪಟ್ಟ ಸ್ಥಂಭಗಳು ಅರಮನೆಯ ಒಳಭಾಗವು ಭವ್ಯವಾಗಿ ಕಾಣುವಂತೆ ಮಾಡಿದ್ದವು. ಬಲಿಷ್ಠವಾದ ಬುನಾದಿಯು ಅರಮನೆಗೆ ಗಾಂಭೀರ್ಯ ಮತ್ತು ಸೌಂದರ್ಯಗಳನ್ನು ಒದಗಿಸಿತ್ತು. ಅದರ ಮುಂಭಾಗದ ವಿಶಾಲವಾದ ಮೊಗಸಾಲೆ ಬೃಹತ್ ಕಮಾನು ಮತ್ತು ಅಕ್ಕಪಕ್ಕದ ಕಮಾನು ಮಾರ್ಗಗಳಿಂದ ಮೂಲಕ ತೆರೆಯಲ್ಪಟ್ಟಿತ್ತು.

ನಾಲ್ಕು ಅಂತಸ್ತಿನ ಭಾಗಗಳು ಅಗಲವಾದ ಹೊಳೆಯುವ ಕಲ್ಲಿನ ಮೆಟ್ಟಿಲುಗಳು, ಅರಮನೆಯ ಸುತ್ತಲಿನ ಸುವಾಸನೆ ಬೀರುವ ಉದ್ಯಾನವನ ಹಾಗೂ ಸ್ಫಟಿಕದಂತೆ ಚಿಮ್ಮುವ ನೀರಿನ ಚಿಲುಮೆಗಳು ಇವೆಲ್ಲಾ ಸೇರಿ ನೋಡುವ ಯಾರ ಕಣ್ಣುಗಳಿಗೇ ಆಗಲಿ ಖಂಡಿತವಾಗಿ ಹಬ್ಬವನ್ನುಂಟು ಮಾಡಿರಲೇಬೇಕು.



## ಆರಸ್ ಮಹಲ್

ಇದು ಅದಾಲತ್ ಮಹಲ್‌ನ ಆಗ್ನೇಯ ದಿಕ್ಕಿನಲ್ಲಿದೆ. ಒಂದು ಪುರಾತನ ಪರ್ಷಿಯನ್ ದಿನಚರಿಯಂತೆ ಇದನ್ನು 1669ರಲ್ಲಿ ಎರಡನೆಯ ಆದಿಲ್ ಷಾ ಸಂತೋಷದ (ಮನರಂಜನೆ) ಅರಮನೆಯಾಗಿ ಕಟ್ಟಿಸಿದ.



ಈ ಪ್ರಸಿದ್ಧ ಅರಮನೆಯು ಹಾಳಾಗುವ ಸ್ಥಿತಿಯಲ್ಲಿದ್ದಾಗ ಇದನ್ನು ಪುನರುಜ್ಜೀವಗೊಳಿಸಿ ರಾಜ್ಯದ ಉಪಯೋಗಕ್ಕಾಗಿ ಪರಿವರ್ತಿಸಲಾಗಿದೆ. ಇದೀಗ ಆರೋಗ್ಯ ಇಲಾಖೆಯ ಜಿಲ್ಲಾ ಶಸ್ತ್ರ ಚಿಕಿತ್ಸಕರ ನಿವಾಸವಾಗಿದೆ.

## ಜಹಾಜ಼್ ಮಹಲ್

ಆಸರ್ ಮಹಲ್ ಪಕ್ಕದಲ್ಲಿ ಅದರ ಭಾಗದಂತಿರುವ ಒಂದಕ್ಕೊಂದು ಸೇರಿಕೊಂಡ ಕಟ್ಟಡಗಳ ಸಮುಚ್ಛಯವಿದೆ. ಆ ಪೈಕಿ ಹಾಳು ಬಿದ್ದ ಒಂದು ಕಟ್ಟಡವೇ ಜಹಾಜ಼್ ಮಹಲ್ ಈ ಕಟ್ಟಡಗಳಲ್ಲಿ ನೌಕಾದಳದ ಆಡಳಿತ ಕಛೇರಿಗಳಿದ್ದವೆಂದು ಹೇಳಲಾಗಿದೆ.



ಆಗ ಬಿಜಾಪುರ ನೌಕಾದಳವನ್ನು ಹೊಂದಿತ್ತು.
ಈಗ ಜಹಾಜ್ ಮಹಲ್ ಬೋಳು ಗೋಡೆಗಳು,
ಬಾಗಿಲುಗಳಿಲ್ಲದ ಪ್ರವೇಶದ್ವಾರಗಳು ಮತ್ತು
ಕಿಟಕಿಗಳನ್ನು ಹೊಂದಿದೆ.



## ಸಾತ್‌ಮಂಜಿಲ್

ಆಯತಾಕಾರದ ಕಟ್ಟಡಗಳ ವಾಯುವ್ಯ ಮೂಲೆಗಿರುವ ಕಟ್ಟಡವಿದು. ಇದನ್ನು ಚಿನಿ ಮಹಲ್ ಅಥವಾ ಫರೋಖ್ ಮಹಲ್ ಎನ್ನುವರು. ಇಂದು ಸರ್ಕಾರಿ ಕಛೇರಿಗಳಿಗಾಗಿ ಇದನ್ನು ಬಳಸಲಾಗುತ್ತಿದೆ. ಮೊದಲು ಇದು ಏಳು ಅಂತಸ್ತುಗಳ ಅರಮನೆಯಾಗಿದ್ದರೂ, ಈಗ ಐದು ಅಂತಸ್ತುಗಳು ಮಾತ್ರ ಇವೆ. ನೆಲ ಮಟ್ಟದಿಂದ 97 ಅಡಿಗಳ ಎತ್ತರವಿರುವ ಈ ಕಟ್ಟಡ ದೊರೆಗಳ ವಾಸಕ್ಕಾಗಿ ಮತ್ತು ಮನರಂಜನೆಗಾಗಿ ಬಳಸಲಾಗುತ್ತಿತ್ತು. ಅಲಂಕೃತ ಸ್ನಾನ ಗೃಹಗಳು, ವಿವಿಧ ಕೊಠಡಿಗಳಲ್ಲಿನ ನೀರಿನ ತೊಟ್ಟಿಲುಗಳು ಮತ್ತು ನೀರಿನ ಕೊಳವೆಗಳು ಪ್ರತಿ ಅಂತಸ್ತಿನಲ್ಲಿದ್ದು ಮೇಲಿನ ಅಂಶವನ್ನು ದೃಢಪಡಿಸುತ್ತದೆ. ಇದನ್ನು ಎರಡನೆಯ ಇಬ್ರಾಹಿಂ ನಿರ್ಮಿಸಿದ್ದರೂ, ಈ ಅರಮನೆಯ ವರ್ಣಚಿತ್ರಗಳು ಚಿನ್ನದ ಲೇಪ ಮತ್ತು ವಿಶಿಷ್ಟ ಅಲಂಕಾರವನ್ನು ಅವನ ಮಗ ಮಹಮದ್ ಆದಿಲ್‌ಷಾ ಮಾಡಿಸಿದ. ತನಗಾಗಿ ಮತ್ತು ಪ್ರೇಯಸಿ ರಂಭಾಳಿಗಾಗಿ ಸುಂದರ ಅರಮನೆಯನ್ನಾಗಿಸಿ ಶ್ರೀಮಂತಗೊಳಿಸಿದ.



ಕೆಲವು ವರ್ಷಗಳ ಹಿಂದೆಯೂ ಅವರಿಬ್ಬರ ಭಾವಚಿತ್ರದ ಕುರುಹನ್ನು ಮೊದಲ ಮಹಡಿಯ ಉತ್ತರದ ಗೋಡೆಯಲ್ಲಿ ಕಾಣಬಹುದಿತ್ತು. ಈಗ ಅಂತಹ ಶ್ರೀಮಂತ ವರ್ಣ ಚಿತ್ರದ ಕುರುಹು ಕಂಡು ಬರುವುದಿಲ್ಲ. ವಿವಿಧ ಮಹಡಿಗಳಲ್ಲಿನ ಛಾವಣಿಗಳಲ್ಲಿ ಕೆಲವು ಬಣ್ಣದ ಕೆಲಸವನ್ನು ನೋಡಬಹುದಾಗಿದೆ. ಆದರೆ, ಅದರ ಎತ್ತರ ಮತ್ತು ಕೋಟೆ ಗೋಡೆಗಳ ಮೇಲಿನ ಆಕಾರ ಕಿಲ್ಲೆಯೊಳಗಿನ ಮರಗಳು ಹಾಗೂ ಕಂದಕದ ನೀರಿನ ಹಿನ್ನೆಲೆ ಅಪರೂಪದ ಸೌಂದರ್ಯವನ್ನು ಪ್ರದರ್ಶಿಸುತ್ತದೆ.

ಕಟ್ಟಡದ ಮೇಲ್ಭಾಗದಿಂದ ಬಿಜಾಪುರ ನಗರದ ಸುಂದರವಾದ ದೃಶ್ಯವನ್ನು ನೋಡಬಹುದು.





## ಫಾನಿ ಮಹಲ್

ಸಾತ್‌ಮಹಲ್ ಬಳಿ ಸಣ್ಣ ಕಂದಕದ ಮೇಲಿರುವ ಫಾನಿ ಮಹಲ್ ಮತ್ತು ಜಲಮಹಲ್ ಆದಿಲ್‌ಷಾಹಿಗಳ ಮನರಂಜನಾ ತಾಣಗಳಾಗಿದ್ದವು. ಇವು ಚಿಕ್ಕದಿದ್ದರೂ, ಸುಂದರವಾದ ವಿನ್ಯಾಸಕ್ಕೆ ಹೆಸರಾಗಿವೆ.






## ಮೆಹ್ತರ್ ಮಹಲ್

ಜಾಮಿ ಮಸೀದಿ ರಸ್ತೆಗೆ ಹೊಂದಿಕೊಂಡಂತೆ ಇರುವ ಮೆಹ್ತರ್ ಮಹಲ್ ಚಿಕ್ಕ ಮಸೀದಿಗೆ ಕರೆದೊಯ್ಯುವ ಒಂದು ಅಲಂಕೃತವಾದ ಪ್ರವೇಶದ್ವಾರವಾಗಿದೆ. ಇದನ್ನು ಯಾರು ಯಾವಾಗ ಕಟ್ಟಿಸಿದರೆಂಬ ಬಗ್ಗೆ ದಾಖಲೆ ಇಲ್ಲ. ಇದರ ಅಲಂಕಾರದ ವಿನ್ಯಾಸ, ವಾಸ್ತುಶೈಲಿ, ಕೆತ್ತನೆ ಕೆಲಸವನ್ನು ಗಮನಿಸಿದರೆ ಇದನ್ನು ಕ್ರಿ.ಶ. 1620ರಲ್ಲಿ ಕಟ್ಟಿಸಿರಬಹುದೆಂದು ತಿಳಿಯುತ್ತದೆ. ಇದರ ಮಿನಾರ್‌ಗಳು 60 ಅಡಿ ಎತ್ತರವನ್ನು ಹೊಂದಿವೆ.

ಇತಿಹಾಸ ತಜ್ಞ ಪರ್ಸಿಬ್ರೌನ್ ಇದರ ಬಗ್ಗೆ ಹೀಗೆ ಉಲ್ಲೇಖಿಸಿದ್ದಾರೆ; "ಇದರ ನಿರ್ಮಾಣ ಕೌಶಲ್ಯ ಆಶ್ಚರ್ಯಕರವಾದುದು, ಕಲ್ಲುಗಳನ್ನು ಜೇಡಿಮಣ್ಣಿನ ಹಲಗೆಗಳಂತೆ ರೂಪುಗೊಳಿಸಲಾಗಿದೆ. ಪ್ರವೇಶದ್ವಾರದ ಸುತ್ತಲಿನ ಉಳಿಯ ಕೆತ್ತನೆ ಅಥವಾ ನೆಲ ಅಂತಸ್ತಿನ ಮೇಲ್ಛಾವಣಿಯ ದೃಢವಾದ ಕಾಮಗಾರಿ ಎಲ್ಲ ಪ್ರೀತಿ ಮತ್ತು ಎಚ್ಚರಿಕೆಯಿಂದ ಮಾಡಲ್ಪಟ್ಟಿದ್ದು ಇಟಲಿಯ ಕ್ವಾಟ್ರೊ-ಸೆಂಟ್ರೋವನ್ನು ಹೋಲುತ್ತದೆ. ಕುಶಲ ಕೆಲಸಗಾರರು ಮಾತ್ರವಲ್ಲದೆ, ಅವರನ್ನು ಪ್ರೋತ್ಸಾಹಿಸಿದ ಕರ್ತರು ಸಹ ಇದರ ನಿರ್ಮಾಣದ ಪರಿಪೂರ್ಣತೆಯ ಬಗ್ಗೆ ಹೆಮ್ಮೆ ಮತ್ತು ಸಂತೋಷವನ್ನು ಹೊಂದಿದ್ದರು ಎಂಬುದು ಇಡೀ ಕಟ್ಟಡವು ಸೂಚಿಸುತ್ತದೆ."





# ಅಸರ್ ಮಹಲ್

ಕೋಟೆಯ ಪೂರ್ವಕ್ಕಿರುವ ಆಸರ್ ಮಹಲ್ ನ್ಯಾಯ ಸಭಾಂಗಣವೆಂದು 1646ರಲ್ಲಿ ಸುಲ್ತಾನ್ ಮಹಮ್ಮದನಿಂದ ನಿರ್ಮಿಸಲ್ಪಟ್ಟಿತು. ಇದರ ಮೂಲ ಹೆಸರು “ದಾದ್ ಮಹಲ್”. ಇದು ಹೊರಗಿನಿಂದ ಭೇದಿಸಲ್ಪಡ ಬಹುದೆಂದು ಸಲಹೆ ನೀಡಿದ್ದರಿಂದ ಮಹಮ್ಮದ್ ಆದಿಲ್ ಷಾ ಅದಾಲತ್ ಮಹಲನ್ನು ನಿರ್ಮಿಸಿ, ದಾದ್ ಮಹಲನ್ನು ಮೆಕ್ಕಾದಿಂದ ಮೀರ್ ಮಹಮ್ಮದ್ ಸಲಿ ಹಮ್ದಾನಿ ಎಂಬಾತ ಬಿಜಾಪುರಕ್ಕೆ ತಂದ ಪ್ರವಾದಿ ಮಹಮ್ಮದರ ಗಡ್ಡದ ಎರಡು ಕೂದಲುಗಳನ್ನು ಇಲ್ಲಿ ಸಂಗ್ರಹಿಸಲು ವ್ಯವಸ್ಥೆ ಮಾಡಿದ.

ಆಸರ್ ಮಹಲ್ ಆಯತಾಕಾರದಲ್ಲಿದ್ದು 150 ಅಡಿ X 100 ಅಡಿ ವಿಸ್ತೀರ್ಣದಲ್ಲಿ ನೆಲ ಅಂತಸ್ತು ಮತ್ತು ಮೇಲ್ಮಹಡಿಯನ್ನು ಹೊಂದಿದೆ. ಪೂರ್ವಕ್ಕೆ, ಎದುರುಗಡೆಗೆ ಕಟ್ಟಡದ ಉದ್ದಕ್ಕೂ 150 ಅಡಿ X 30 ಅಡಿ ವಿಸ್ತೀರ್ಣದ ದೊಡ್ಡ ಮೊಗಸಾಲೆಯಿದೆ. ಇದರ ಛಾವಣಿ ಬಣ್ಣದಿಂದ ಕೂಡಿದ ಮರದಿಂದ ಮಾಡಲ್ಪಟ್ಟಿದ್ದು ಇದರ ಆಧಾರವಾಗಿ 30 ಅಡಿ ಎತ್ತರದ ತೇಗದ ಮರದ ನಾಲ್ಕು ಕಂಬಗಳಿವೆ.

ಮೊಗಸಾಲೆಯಿಂದ ಮೇಲ್ಪಂಕ್ತಿಗೆ ಹೋಗಲು ಎರಡು ಕಡೆ ಕಲ್ಲಿನ ಸೋಪಾನಗಳಿವೆ. ಪೂರ್ವದ ಗೋಡೆಯ ಮಧ್ಯ ಭಾಗದಲ್ಲಿರುವ ಬಾಗಿಲು ಕೈಸಾಲೆಗೆ (ಬಾಲ್ಕನಿ) ನಮ್ಮನ್ನು ಕರೆದೊಯ್ಯುತ್ತದೆ. ಗೋಡೆ ಮತ್ತು ಬಾಲ್ಕನಿಯ ಮೇಲ್ಭಾಗಗಳು ಸಮೃದ್ಧವಾದ ಬಣ್ಣಗಳಿಂದ ಚಿತ್ರಿಸಲ್ಪಟ್ಟಿವೆ.





ಮೇಲಂತಸ್ತಿನಲ್ಲಿ ಮೂರು ಕೊಠಡಿಗಳಿದ್ದು ಅವುಗಳಲ್ಲಿ ನೆಲಹಾಸುಗಳು, ಪರದೆಗಳು ಮತ್ತು ವೆಲ್ವೆಟ್ ಇಳಿವಸ್ತ್ರಗಳನ್ನು ಬಳಸಲಾಗಿದೆ. ಬಾಲ್ಕಾನಿ ಮತ್ತು ಚಿನ್ನದ ವರ್ಣಲೇಪಗಳಿಂದ ಕೂಡಿದ ಅಂಗಣದ ಪಕ್ಕದ ಕೊಠಡಿಯು ಆಡಂಬರದ ಬಣ್ಣಗಳಿಂದ ಕೂಡಿದೆ. ಅದರ ಗೋಡೆಗಳು, ಗೋಡೆಯಲ್ಲಿನ ಗೂಡುಗಳು ಹಾಗೂ ಛಾವಣಿಯು ಎಲೆಗಳು, ಹೂಗಳು, ಬಳ್ಳಿಗಳು, ಎಲೆಗಳ ಗುಚ್ಛ ಗುಂಪನ್ನು ಕಲಾತ್ಮಕವಾಗಿ ಬಿಡಿಸಿ ಆಕರ್ಷಕ ಬಣ್ಣಗಳಿಂದ ಸಿಂಗರಿಸಲ್ಪಟ್ಟಿದ್ದು ಸಂಪ್ರದಾಯಸ್ಥ ಮುಸ್ಲಿಂ ಪರಂಪರೆ ದ್ಯೋತಕವಾಗಿದೆ. ದಕ್ಷಿಣ ಮೂಲೆಯಲ್ಲಿನ ಕೊಠಡಿಯು ಸಹ ಸಾಕಷ್ಟು ವರ್ಣಚಿತ್ರಗಳಿಂದ ಕೂಡಿದ್ದು, ಗೋಡೆಗಳ ಮೇಲೆ ಸ್ತ್ರೀಪುರುಷರ ಪ್ರೇಮ ಭಂಗಿಗಳನ್ನು ತೋರಿಸುವ ಸುಂದರವಾದ ವರ್ಣಚಿತ್ರಗಳನ್ನು ಬಿಡಿಸಲಾಗಿದೆ. ಔರಂಗಜೇಬನ ಆದೇಶದ ಮೇಲೆ ಎಲ್ಲ ಚಿತ್ರಗಳನ್ನು ಕೆಡಿಸಿ ಗುರುತು ಸಿಗದಂತೆ ಹಾಳು ಮಾಡಲಾಗಿದೆ.



ದಕ್ಷಿಣಕ್ಕಿರುವ ಕೊಠಡಿಯಲ್ಲಿ ಮದೀನಾದಲ್ಲಿನ ಪ್ರವಾದಿ ಮಹಮ್ಮದರ ಗೋರಿಯ ಮಾದರಿಯಿದೆ. ಈ ಕೊಠಡಿಯಲ್ಲಿ ಪ್ರವಾದಿ ಮಹಮ್ಮದರ ಎರಡು ಕೂದಲುಗಳನ್ನು ಇಡಲಾಗಿದೆ ಎನ್ನಲಾದ ಗಟ್ಟಿಯಾದ ಕರಿಯ ಮರದಿಂದ ಮತ್ತು ಚಿನ್ನದಿಂದ ಮಾಡಲ್ಪಟ್ಟ ಚಿಕ್ಕ ಪೆಟ್ಟಿಗೆಯಿದ್ದು ಇದನ್ನು ಗಟ್ಟಿಯಾದ ತ್ರಿಕೋನಾಕಾರದ ಇನ್ನೊಂದು ಪೆಟ್ಟಿಗೆಯಲ್ಲಿ ಇಡಲಾಗಿದೆ.


ರಬಿ-ಉಲ್-ಅವ್ವಲ್‌ನಲ್ಲಿ (ಮಾರ್ಚ್) ನಡೆಯುವ ವಾರ್ಷಿಕ ಉರುಸ್ ವೇಳೆ, ಇಂತೆಜಾಮಿ ಸಮಿತಿಯವರು ಈ ಕೊಠಡಿಯನ್ನು ಪ್ರವೇಶಿಸುತ್ತಾರೆ.

# ಬಿಜಾಪುರದ ನೀರಿನ ನೆಲೆಗಳು

## ತಾಜ್ ಬಾವಡಿ

ಬಿಜಾಪುರದ ಅನೇಕ ಕೆರೆಕಟ್ಟೆಗಳನ್ನು ಹಿಂದೆ ನಗರದ ಮುಖ್ಯವಾದ ನೀರು ಸರಬರಾಜು ಮೂಲಗಳನ್ನಾಗಿ ಉಪಯೋಗಿಸಲಾಗುತ್ತಿತ್ತು. ಈ ಪೈಕಿ ಚಾಂದ್ ಬಾವಡಿ ಮತ್ತು ತಾಜ್ ಬಾವಡಿಗಳು ಪ್ರಮುಖ ನೀರು ಪೂರೈಕೆ ಮೂಲಗಳಾಗಿದ್ದವು. ಇವುಗಳ ವಾಸ್ತು ಸೌಂದರ್ಯ ಅದ್ವಿತೀಯ.

ಬಿಜಾಪುರಕ್ಕೆ 5 ಕಿ.ಮೀ. ಪಶ್ಚಿಮಕ್ಕೆ ನಿರ್ಮಾಣಗೊಂಡ ನೀರುಸಾಗಣೆಯ ಮೇಲ್ಗಾವೆಯು ನಗರಕ್ಕೆ ನೀರು ಸರಬರಾಜು ಮಾಡುವ ಮೂಲವಾಗಿತ್ತು. ತೊರವಿಯಿಂದ ನೀರನ್ನು ಹರಿಸುವ ಕಾಲುವೆಯು ಉತ್ತಮ



ಮಟ್ಟದ ತಾಂತ್ರಿಕ ಕೌಶಲ್ಯದಿಂದ ಕೂಡಿದೆ. ಅದರಂತೆಯೇ ಮಹಮ್ಮದ್ ಆದಿಲ್‌ಷಹನು ನಿರ್ಮಿಸಿದ ಬೇಗಂ ತಲಾಬ್‌ನಿಂದ 15 ಇಂಚು ವ್ಯಾಸವುಳ್ಳ ಮಣ್ಣಿನ ಕೊಳವೆಗಳ ಮೂಲಕ ನಗರಕ್ಕೆ ನೀರು ಸರಬರಾಜು ಮಾಡಲಾಗುತ್ತಿತ್ತು. ನಗರದ ಒಳಗೆ ಚಿಕ್ಕ ಕಾಲುವೆಗಳು ಮತ್ತು ಕೊಳವೆಗಳ ಮೂಲಕ ಅರಮನೆಯ ಎಲ್ಲ ಉದ್ಯಾನಗಳು ಮತ್ತು ಕಾರಂಜಿಗಳಿಗೆ ನೀರು ಸರಬರಾಜಾಗುತ್ತಿತ್ತು. ಬಿಸಿಲ ಬೇಗೆಯನ್ನು ತಪ್ಪಿಸಲು ನಗರಕ್ಕೆ ನಿಶ್ಚಿತವಾಗಿ ನೀರು ಸರಬರಾಜು ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು.

ಕ್ಯಾಪ್ಟನ್ ಕುಕ್ಸ್ 1815ರಲ್ಲಿ ಬಿಜಾಪುರದಲ್ಲಿ ಸುಮಾರು 700 ಮೆಟ್ಟಿಲು ಭಾವಿ ಮತ್ತು 300 ಸೇದುವ ಭಾವಿಗಳು ಕೋಟೆಯ ಒಳಭಾಗದಲ್ಲಿ, ಬಿಜಾಪುರದ ಆದಿಲ್‌ಷಾಹಿ ಆಡಳಿತದ ಪತನವಾದ 100 ವರ್ಷಗಳ ನಂತರ ಗುರುತಿಸಿದನು. ಈಗಲೂ ಸುಮಾರು 200 ದೊಡ್ಡ ಮತ್ತು ಸಣ್ಣ ಭಾವಿಗಳನ್ನು ಕಾಣಬಹುದು.



# ಬಿಜಾಪುರದ ತೋಪುಗಳು

ಕೆಳಗೆ ವಿವರಿಸಿದಂತೆ ಆದಿಲ್‌ಷಾನ ಕಾಲದ ತೋಪುಗಳನ್ನು ಬಿಜಾಪುರ ನಗರದ ವಿವಿದೆಡೆಗಳಲ್ಲಿ ಇಡಲಾಗಿದೆ.

## ಮಾಲಿಕ್-ಎ-ಮೈದಾನ್ ತೋಪು

ಫಟ್ಕಾ ಬಾಗಿಲಿನ ಉತ್ತರಕ್ಕೆ ಸುಮಾರು 300 ಅಡಿಗಳ ದೂರದಲ್ಲಿ ಸೆರ್ಜೆ ಬುರುಜು ಅಥವಾ ಸಿಂಹ ಗೋಪುರವಿದೆ. ಇದರ ಪ್ರವೇಶದ್ವಾರದ ಬಲಭಾಗದಲ್ಲಿ ಕಲ್ಲಿನಿಂದ ಕೆತ್ತಲ್ಪಟ್ಟ ಅಗ್ರಗಾಮಿ ಸಿಂಹಗಳಿಂದ ಇದಕ್ಕೆ ಈ ಹೆಸರು ಬಂದಿದೆ. ಈ ಮೂಲಕ ಗೋಪುರದ ತುದಿಗೆ ಹೋಗಬಹುದು. ಇದರ ಬುರುಜು ಅಷ್ಟು ಎತ್ತರವಾಗಿಲ್ಲ.

ಮಧ್ಯಭಾಗದಲ್ಲಿ ಫಿರಂಗಿಗಳನ್ನು ಇಡಲು ಎರಡು ವೃತ್ತಾಕಾರದ ಎತ್ತರದ ಜಗಲಿಗಳಿವೆ. ಈ ಪೈಕಿ ಒಂದರಲ್ಲಿ, ಮರದ ತೊಲೆಗಳು ಆಧಾರದಲ್ಲಿ ಮಾಲಿಕ್-ಇ-ಮೈದಾನ್ (ಮೈದಾನದ ಸಾಮ್ರಾಟ) ಎಂಬ ಬಿಜಾಪುರದ ಪ್ರಸಿದ್ಧ ಫಿರಂಗಿಯಿದೆ. ಲಂಡಾಕಸಬ್ ಬಿಟ್ಟರೆ, ಬಿಜಾಪುರದಲ್ಲಿನ ಅತಿದೊಡ್ಡ ಫಿರಂಗಿಯಿದು. ಇದರ ತೂಕ 55 ಟನ್‌ಗಳೆಂದು ಅಂದಾಜಿಸಲಾಗಿದೆ. ಇದನ್ನು 1549ರಲ್ಲಿ ಒಂದನೇ ಬರ್ಹನ್ ನಿಜ಼ಾಮ್‌ಷಾನ ಸೇವೆಯಲ್ಲಿದ್ದ ತುರ್ಕಿಯ ಅಧಿಕಾರಿಯೊಬ್ಬ ಅಹಮದಾಬಾದಿನಲ್ಲಿ ಎರಕ ಹೊಯ್ದು ಮಾಡಿಸಿದನೆಂದು ಹೇಳಲಾಗಿದೆ. ಇದು ಬೆಸುಗೆ ಹಾಕಲ್ಪಡದೆ ಎರಕ ಹೊಯ್ದು ಮಾಡಲ್ಪಟ್ಟಿರುವುದರಿಂದ, ಇದು ಬಿಜಾಪುರದ ಇತರೆ ಫಿರಂಗಿಗಳಿಗಿಂತ ಭಿನ್ನವಾದುದು. ಇದು ಯಾವುದರ ಮಿಶ್ರಣದಿಂದ ಆದದ್ದೆಂದು ತಿಳಿದಿಲ್ಲವಾದರೂ, ಬಡಿದಾಗ ಘಂಟೆಯ ಶಬ್ದ ಬರುವುದರಿಂದ ಬಹುಶಃ ಘಂಟೆಗೆ ಬಳಸುವ ಲೋಹ ಮಿಶ್ರಣವನ್ನು ಬಳಸಿರಬಹುದು. ಇದು ಕಡು ಹಸಿರು ಬಣ್ಣದಿಂದ ಕೂಡಿದ್ದು, ಮೇಲ್ಭಾಗವನ್ನು ಗಾಜಿನಂತೆ ಹೊಳಪುಗೊಳಿಸಲಾಗಿದೆ.

ಇದರ ಮೇಲ್ಭಾಗದ ಮೂರು ಕಡೆಗಳಲ್ಲಿ ಸುಂದರವಾಗಿ ಪರ್ಷಿಯನ್ ಮತ್ತು ಅರಬ್ಬೀ ಭಾಷೆಗಳಲ್ಲಿ ಕೆತ್ತನೆಯನ್ನು ಮಾಡಲಾಗಿದೆ. ಇದರ ಬೃಹತ್ ಬಾಯಿಯ ಭಾಗವನ್ನು ಸಿಂಹ ಅಥವಾ ಡ್ರಾಗನ್ ತಲೆಯ ಆಕಾರದಲ್ಲಿ ಮಾಡಲಾಗಿದೆ. ಇದರ ಮೂಲಕ ಗುಂಡು ಹಾರಿಸಲಾಗುತ್ತಿತ್ತು. ಇದನ್ನು 1565ರಲ್ಲಿ ಬಿಜಾಪುರದ ಮಹಾಯುದ್ಧಕ್ಕೆ ಕೊಂಡೊಯ್ಯಲಾಗಿತ್ತೆಂದು ಹೇಳಲಾಗಿದೆ. ಇದನ್ನು ವಿಜಯೋತ್ಸವದ ಸಂಕೇತವಾಗಿ ಅಂದಿನ ಸೇನಾಧಿಕಾರಿ ಮುರಾರಿ ಪಂಡಿತನು 1632ರಲ್ಲಿ

ಬಿಜಾಪುರಕ್ಕೆ ತಂದು ಈಗಿನ ಸ್ಥಳದಲ್ಲಿರಿಸಿದನು. ಇದನ್ನು ಪರಂದಾ ಕೋಟೆಯಿಂದ ಹತ್ತು ಆನೆಗಳು, 400 ಎತ್ತುಗಳು ಹಾಗೂ ಅನೇಕ ಜನರ ನೆರವಿನಿಂದ ಇಲ್ಲಿಗೆ ಸಾಗಿಸಲಾಯಿತು.



## ಲಂಡಾ ಕಸಬ್ ತೋಪು

ನಗರದ ಕೋಟೆ ಗೋಡೆಯ ಪಶ್ಚಿಮ ಭಾಗದ ಮಧ್ಯೆ ಲಂಡಾ ಕಸಬ್ ಬುರುಜು ಇದ್ದು, ಈ ಬೃಹತ್ ಫಿರಂಗಯನ್ನು ಅದರ ಮೇಲೆ ಇಡಲಾಗಿದೆ. ಇದು 21 ಅಡಿ 7 ಇಂಚು ಉದ್ದವಿದು ಕೆಳಭಾಗ 4 ಅಡಿ 4 ಇಂಚು ವ್ಯಾಸವನ್ನು ಹೊಂದಿದೆ. ಇದರ ಮುಖಭಾಗ 4 ಅಡಿ 5 ಇಂಚು ಇದ್ದು, ಸುಮಾರು 46ಟನ್‌ಗಳ ತೂಕವುಳ್ಳದ್ದಾಗಿದೆ. ಇದನ್ನು ಆ ಕಾಲದ ಇತರೆ ಕಬ್ಬಿಣದ ಫಿರಂಗಿಗಳಂತೆ ನಿರ್ಮಿಸಲಾಗಿದೆ. ಫಿರಂಗಿಯನ್ನು ಕಬ್ಬಿಣದ ತಿರುಗಣೆಯ ಮೇಲಿರಿಸಲಾಗಿತ್ತು. ಆದರೀಗ ಇದು ಮರದ ದಿಮ್ಮಿಗಳ ಮೇಲಿದೆ.


ಇದರ ಮುಖಭಾಗಕ್ಕೆ ಪೆಟ್ಟು ಬಿದ್ದಂತಿದ್ದು, ಬಹುಶಃ ಔರಂಗಜೇಬನು ಆಕ್ರಮಣಮಾಡಿದಾಗ ಅವನ ಫಿರಂಗಿದಳ ಸಿಡಿಸಿದ ಗುಂಡುಗಳಿಂದ ಹೊಡೆಯಲ್ಪಟ್ಟಿರಬಹುದು. ಇದೇ ಬುರುಜಿನ ಇನ್ನೊಂದು ಕಡೆ, 5 ಅಡಿ 9 ಇಂಚು ಉದ್ದ ಮತ್ತು 9 ಇಂಚು ಬಾಯಿ ಅಳತೆ ಇರುವ ಚಿಕ್ಕ ಕಬ್ಬಿಣದ





ಫಿರಂಗಿಯಿದೆ. 250 ವರ್ಷಗಳಿಗೂ ಮೀರಿ ಹವಾಗುಣದ ಪ್ರಭಾವಕ್ಕೆ ಈಡಾಗಿದ್ದರೂ ಈ ಫಿರಂಗಿಗಳಿಗೆ ತುಕ್ಕು ಹಿಡಿದಿರುವುದಿಲ್ಲ. ಮರ್ತುಜಾಬಾದ್ ಫಿರಂಗಿ, ಉಪರಿ ಬುರುಜು ಮತ್ತು ಅಲ್ಲಿ ಬುರುಜಿನ ಫಿರಂಗಿಗಳು ಹಾಗೂ ನಗರ್ ಖಾನಾದ ಮುಂಭಾಗದಲ್ಲಿರುವ ಫಿರಂಗಿಗಳು ಬಿಜಾಪುರದಲ್ಲಿ ಪ್ರಮುಖವಾದ ಇತರೆ ಫಿರಂಗಿಗಳು.








# ಬಿಜಾಪುರದ ಚಿತ್ರಕಲೆ

ಚಿತ್ರಕಲೆಯ ಬೆಳವಣಿಗೆಯಲ್ಲಿ ಬಿಜಾಪುರವು ಪ್ರಮುಖ ಪಾತ್ರವನ್ನು ವಹಿಸಿದೆ. ಬಿಜಾಪುರದ ಬಹುತೇಕ ಸುಲ್ತಾನರು ಸ್ವತಃ ಅದ್ವಿತೀಯ ಚಿತ್ರಕಾರರಾಗಿದ್ದರು ಅಥವಾ ವರ್ಣಚಿತ್ರಕಲೆಯ ಪೋಷಕರಾಗಿದ್ದರು. ಆದರೂ, ದಖ್ಖನೀ ಶೈಲಿಯು ಯಾವ ರಾಜ್ಯದಲ್ಲಿ ಪ್ರಾರಂಭವಾಯಿತೆಂದು ಹೇಳುವುದು ಕಷ್ಟ. ಬಿಜಾಪುರ ಶೈಲಿಯ ಅತ್ಯಂತ ಪ್ರಾಚೀನ ಚಿತ್ರಕಲೆಯು ಪ್ರಸಿದ್ಧವಾದ 1570ರ "ನುಜುಮ್-ಉಲ್-ಉಲುಮ್" ನಲ್ಲಿ ಕಾಣಸಿಗುತ್ತದೆ. ಬಿಜಾಪುರದ ಈ ಪ್ರಾರಂಭಿಕ ಶೈಲಿ ಮತ್ತು ಅಹ್ಮದ್ ನಗರದ ಶೈಲಿಯ ವರ್ಣಚಿತ್ರಗಳನ್ನು ವಿಶ್ಲೇಷಿಸಿದರೆ, ಇವುಗಳ ಮೇಲೆ ಅನೇಕ ಪ್ರಭಾವಗಳು ಆಗಿದ್ದವೆಂದು ತಿಳಿದು ಬರುತ್ತದೆ. ಇವುಗಳಲ್ಲಿ, ವಿಜಯನಗರ, ಪಶ್ಚಿಮ ಭಾರತ ಮತ್ತು ಪರ್ಷಿಯನ್ ಶೈಲಿಗಳ ಪ್ರಭಾವಗಳನ್ನು ಸುಲಭವಾಗಿ ಗುರ್ತಿಸಬಹುದಾಗಿದೆ.

ಅನೇಕ ಚಿತ್ರಪಟಗಳು ಮತ್ತು ಈ ಕಾಲದ ಅದರಲ್ಲೂ ಸ್ವತಃ ಪ್ರತಿಭಾವಂತ ಚಿತ್ರರಚನಾಕಾರನಾಗಿದ್ದ ಎರಡನೆಯ ಇಬ್ರಾಹಿಂನ ಕಾಲದ ವರ್ಣಚಿತ್ರಗಳು ನಮಗೆ ಖಾಸಗಿ ಸಂಗ್ರಹಗಳಾಗಿ ಹಾಗೂ ವಸ್ತು ಸಂಗ್ರಹಾಲಯಗಳ ಮೂಲಕ ಬಂದಿವೆ.

ಎರಡನೆಯ ಇಬ್ರಾಹಿಂ ಆದಿಲ್ ಷಾನ ಕಾಲದ ಚಿತ್ರಕಲೆಯನ್ನು ಗಮನಿಸಿದರೆ, ಬಿಜಾಪುರ ಚಿತ್ರಕಲಾ ಶೈಲಿಯು ಹದಿನಾರನೆಯ ಶತಮಾನದ ಅಂತ್ಯಭಾಗದಲ್ಲಿ ಅಸ್ತಿತ್ವಕ್ಕೆ ಬಂದಿತೆಂದು ಹೇಳಬಹುದು. 1620ರ ವೇಳೆಗೆ ಮೊಗಲ್ ವರ್ಣಚಿತ್ರಗಳು ಬಿಜಾಪುರಕ್ಕೆ ಬಂದ ಬಗ್ಗೆ ಪುರಾವೆಯಿದೆ; ಜಹಾಂಗೀರನ ವೃತ್ತಾಂತದಲ್ಲಿ ಆತ ತನ್ನ ಚಿತ್ರಪಟವನ್ನು ಎರಡನೆಯ ಇಬ್ರಾಹಿಂಗೆ ಕಳುಹಿಸಿದನೆಂದು ದಾಖಲಿಸಲಾಗಿದೆ. ಮಹಮ್ಮದ್ ಆದಿಲ್ ಷಾನ ಕಾಲದಲ್ಲಿ ಬಿಜಾಪುರದ ಚಿತ್ರಕಲೆಯ ಮೇಲೆ ಯೂರೋಪಿನ ಪ್ರಭಾವವು ಇದ್ದ ಬಗ್ಗೆ ಕುರುಹುಗಳಿವೆ. ಅಸರ್ ಮಹಲ್‌ನ ಗೋಡೆಗಳ ಮೇಲೆ ಕಂಡು ಬರುವ ವರ್ಣಚಿತ್ರಗಳು, ಮಹಮ್ಮದ್ ಆದಿಲ್ ಷಾ ಇಟಲಿಯ ಕಲಾಕಾರರನ್ನು ತನ್ನ ಆಸ್ಥಾನಕ್ಕೆ ಆಹ್ವಾನಿಸಿದ್ದನೆಂಬುದನ್ನು ತೋರಿಸುತ್ತವೆ.




ಹೆಸರುವಾಸಿಯಾದ ರಾಗಮಾಲಾ ಚಿತ್ರಗಳ ಮೂಲಸ್ಥಾನದ ಬಗ್ಗೆ ವಿವಾದವಿದ್ದರೂ ಅವು ದಖ್ಖನೀ ಮೂಲದ್ದೆಂಬುದು ಸ್ಪಷ್ಟ. ಡಾ॥ ಗಿಯೋಜ್ ತನ್ನ 'ಬಿಕನೇರ್-ಕಲೆ ಮತ್ತು ವಾಸ್ತುಶಿಲ್ಪ' ಎಂಬ ಕೃತಿಯಲ್ಲಿ ಈ ಚಿತ್ರಗಳು ಅಹಮ್ಮದ್‌ನಗರದ ಮೂಲವನ್ನು ಹೊಂದಿವೆಯೆಂದು ತಿಳಿಸಿದ್ದಾನೆ.

ಬೇಸಿಲ್ ಗ್ರೇ ಎಂಬಾತ ತನ್ನ ಕೃತಿ 'ಕಲೆ - ಭಾರತ ಮತ್ತು ಪಾಕಿಸ್ತಾನ'ದಲ್ಲಿ ರಾಗಮಾಲಾ ಚಿತ್ರಕಲೆಯ ಮೂಲ ಅಹಮ್ಮದ್ ನಗರ ಅಥವಾ ಬಿಜಾಪುರವೆಂದು ಅಂದಾಜಿಸಿದ್ದಾನೆ.

ಡಾ॥ ಮೋತಿಚಂದ್ರರು ಮಾತ್ರ, ಇವುಗಳ ಮೂಲ ಬಿಜಾಪುರದ್ದೆಂದೂ, ಸಂಗೀತ ಮತ್ತು ರಾಗಗಳ ಬಗೆಗಿನ ಸಾಧನೆ ಮತ್ತು ಜ್ಞಾನದಿಂದ ಕೂಡಿದ್ದ ಎರಡನೇ ಇಬ್ರಾಹಿಂ ಆದಿಲ್‌ಷಾನ ಕಾಲಕ್ಕೆ ಸೇರಿದ್ದೆಂದು ಹೇಳಿದ್ದಾರೆ.



ಈ ಚಿತ್ರಗಳು ವಿವಿಧ ಮೂಲೆಗಳುಳ್ಳ ಚಿತ್ರಗಾರಿಕೆಯ ನೈಪುಣ್ಯ ದಖ್ಖಿನೀ ಶೈಲಿಯ ವಿಸ್ತಾರ ಹಾಗೂ ಹೂಗಳ ಚಿತ್ತಾರದ ಹಿನ್ನೆಲೆಯಯನ್ನು ಹೊಂದಿದೆ.





# ಬಿಜಾಪುರದ ದೇವಾಲಯಗಳು

## ಸಿದ್ಧರಾಮೇಶ್ವರ ದೇವಾಲಯ

ಸಿದ್ಧರಾಮೇಶ್ವರ ದೇವಾಲಯವು ಬಿಜಾಪುರ ಪರಂಪರೆಯ ಒಂದು ಮುಖ್ಯ ಭಾಗವಾಗಿದೆ. ಇದು ಶಿವಾಲಯವಾಗಿದ್ದು, ಕೆಂಪು ಕಲ್ಲಿನಿಂದ ನಯವಾಗಿ ಕೆತ್ತಲ್ಪಟ್ಟ ಬೃಹತ್ ನಿರ್ಮಾಣವಾಗಿದೆ. ಈ ದೇವಾಲಯಕ್ಕೆ ಅಪಾರ ಭಕ್ತರಿದ್ದಾರೆ. ಪ್ರತಿವರ್ಷ ಮಕರ ಸಂಕ್ರಾಂತಿಯ ಸಂದರ್ಭದಲ್ಲಿ ಇಲ್ಲಿ ಜಾತ್ರೆ ನಡೆಯುತ್ತದೆ.







## ನರಸಿಂಹ ದೇವಾಲಯ

ಇಲ್ಲಿ ಎರಡು ನರಸಿಂಹ ದೇವಾಲಯಗಳಿವೆ. ಒಂದು ಇತ್ತೀಚಿನದಾದರೆ, ಇನ್ನೊಂದು ಹಾಳು ಬೀಳುತ್ತಿರುವ ಪುರಾತನ ದೇವಾಲಯವಾಗಿದೆ. ಈ ದೇವಾಲಯವು ನರಸೋಬಾ ದೇವಾಲಯವೆಂದು ಖ್ಯಾತಿ ಪಡೆದಿದೆ. ಹಳೆಯ ನರಸಿಂಹ ದೇವಾಲಯದಲ್ಲಿ 11ನೆಯ ಶತಮಾನದ ಶಿಲಾಶಾಸನಗಳನ್ನು ಕಾಣಬಹುದು. ನರಸೋಬಾ ದೇವಾಲಯವು ಕೋಟೆಯ ಪಶ್ಚಿಮ ಭಾಗಕ್ಕಿದೆ. ಇದನ್ನು ನರಸೋಬಾ ಅಥವಾ ದತ್ತಾತ್ರೇಯ ದೇವರಿಗೆ ಅಂಕಿತಮಾಡಲಾಗಿದೆ. ಪ್ರಾಂಗಣವು ಕಲ್ಲಿನಿಂದ ನಿರ್ಮಾಣಗೊಂಡಿದ್ದು, ಈಗ ಜೀರ್ಣೋದ್ಧಾರಗೊಳಿಸಲಾಗಿದೆ.



ಎರಡನೇ ಇಬ್ರಾಹಿಂ ಆದಿಲ್ ಷಾ ಈ ದೇವಾಲಯದ ಬಗ್ಗೆ ವಿಶೇಷ ಆಸಕ್ತಿಯನ್ನು ಹೊಂದಿ ಅಲ್ಲಿ ಪೂಜೆ ಸಲ್ಲಿಸುತ್ತಿದ್ದನೆಂದು ವರದಿಮಾಡಲಾಗಿದೆ.

ಕಾಖಂಡಕಿಯ ಶ್ರೀ ಮಹೀಪತಿರಾಯ (1611-1681) ಈ ದೇವಾಲಯದಲ್ಲಿ ವಾಸಿಸುತ್ತಿದ್ದನೆಂದು ಹೇಳಲಾಗಿದೆ. ಇಲ್ಲಿ ಆತ ಪ್ರತಿ ದಿನ ಉಪನ್ಯಾಸಗಳನ್ನು ನೀಡುತ್ತಿದ್ದ. ಆತ ಕನ್ನಡ, ಮರಾಠಿ, ತೆಲುಗು, ಉರ್ದು, ಪಾರ್ಸಿ ಭಾಷೆಗಳಲ್ಲಿ ಪ್ರಾವೀಣ್ಯತೆ ಪಡೆದಿದ್ದ. ಆತ, ಆದಿಲ್‌ಷಾಹಿಗಳ ಸೇನಾಧಿಕಾರಿ ಖವಾಸ್‌ಖಾನನಿಗೆ ಉರ್ದು ಭಾಷೆಯಲ್ಲಿ ಧಾರ್ಮಿಕ ಬೋಧೆ ಮಾಡುತ್ತಿದ್ದನೆಂದು ಹೇಳಲಾಗಿದೆ. ಇದರಿಂದ ಸಂತೋಷಗೊಂಡಿದ್ದ ಖಾನನು ಮಹೀಪತಿರಾಯನನ್ನು ಅರಮನೆಯ ವಿದ್ವಾಂಸನನ್ನಾಗಿ ನೇಮಿಸಿದ್ದ.



# ಬಿಜಾಪುರದ ಸುತ್ತಮುತ್ತ

ತಿಕೋಟಾ, ನವರಸಪುರ, ಐನಾಪುರ, ಕುಮಟಗಿ ಮುಂತಾದ ಸ್ಥಳಗಳಲ್ಲಿ ಆದಿಲ್‌ಷಾಹಿಗಳ ಸ್ಮಾರಕಗಳಿವೆ. ಇಲ್ಲಿನ ಅರಮನೆಗಳು, ವಿಶ್ರಾಂತಿಧಾಮಗಳು ಮತ್ತು ಮಸೀದಿಗಳು ವಾಸ್ತುಶಿಲ್ಪ ದೃಷ್ಟಿಯಿಂದ ಬಿಜಾಪುರದಷ್ಟೆ ಮಹತ್ವಹೊಂದಿದೆ.

## ನವರಸಪುರ

ಸುಮಾರು 1602ರಲ್ಲಿ ಇಬ್ರಾಹಿಂ ಆದಿಲ್‌ಷಾ ಸರ್ಕಾರದ ಕೇಂದ್ರ ಸ್ಥಾನವನ್ನು ಬಿಜಾಪುರದಿಂದ 5 ಕಿ.ಮೀ. ಪಶ್ಚಿಮಕ್ಕೆ ಬದಲಾಯಿಸಲು ತೀರ್ಮಾನಿಸಿ ಅಲ್ಲಿ ಕಟ್ಟಡಗಳು, ಅರಮನೆಗಳು ಮತ್ತು ಉದ್ಯಾನಗಳನ್ನು ನಿರ್ಮಿಸಿ ಅದಕ್ಕೆ ನವರಸಪುರವೆಂದು ಕರೆದ. ಏರ್ಪಾಟುಗಳೆಲ್ಲಾ ಮುಗಿಯುತ್ತಿದ್ದಂತೆ, ಜ್ಯೋತಿಷಿಗಳಿಂದ ಆವನಿಗೆ ರಾಜಧಾನಿಯನ್ನೂ ಬದಲಾಯಿಸದಿರಲು ಎಚ್ಚರಿಸಲ್ಪಟ್ಟಿತು. ನವರಸಪುರದಲ್ಲಿ ಅರಮನೆಗಳ ನಿರ್ಮಾಣ ಪೂರ್ಣಗೊಂಡ ನಂತರ, ಸುಲ್ತಾನನು ಅಲ್ಲಿಯೇ ಹೆಚ್ಚು ಸಮಯ



ಕಳೆಯುತ್ತಿದ್ದ. ಈ ಅರಮನೆಗಳನ್ನು ಸಂಗೀತ ಮಹಲ್ ಮತ್ತು ನಾರಿ ಮಹಲ್‌ಗಳೆಂದು ಕರೆಯಲಾಗುತ್ತದೆ.

## ಸಂಗೀತ ಮಹಲ್

ಇದೊಂದು ಅತ್ಯಂತ ರಮಣೀಯವಾದ ಸ್ಥಳ ನವರಸಪುರದ ಬಹುಭಾಗ ಈಗ ಅವನತಿಯಲ್ಲಿದೆ. ಬಿಜಾಪುರದಲ್ಲಿ ಪ್ರತಿವರ್ಷ ನವರಸಪುರ ಉತ್ಸವವನ್ನು ಆಚರಿಸಲಾಗುತ್ತದೆ.

## ಕುಮಟಗಿ

ಬಿಜಾಪುರದಿಂದ ಪೂರ್ವಕ್ಕೆ 16 ಕಿ.ಮೀ. ದೂರದಲ್ಲಿನ ಕುಮಟಗಿಯ ಆದಿಲ್‌ಷಾಹಿಗಳ ವಿಹಾರ ತಾಣವಾಗಿತ್ತು. ಊರಿನ ಹೊರಭಾಗದಲ್ಲಿ ಸುಂದರ ಸರೋವರ, ಕಲ್ಲಿನ ಸಾಧುಗಳು ಹಾಗೂ ಜಲಕ್ರೀಡಾಂಗಣಗಳಿವೆ. ಕಟ್ಟಡಗಳಲ್ಲಿನ ನೀರಿನ ತೊಟ್ಟಿಗಳು, ಕಾರಂಜಿಗಳು ಮತ್ತು ನೀರಿನ ನಳಿಕೆಗಳ ಜಾಲವನ್ನು ಹೊಂದಿವೆ. ಗೋಡೆಗಳ ಮೇಲೆ ಕೆಲವು ಪ್ರಸಿದ್ಧವಾದ ವರ್ಣಚಿತ್ರಗಳಿವೆ.



## ಐನಾಪುರ - ಸಮಾಧಿ ಮತ್ತು ಮಹಲ್

ಬಿಜಾಪುರದ ಪೂರ್ವಕ್ಕೆ 5 ಕಿ.ಮೀ. ದೂರದಲ್ಲಿರುವ ಐನಾಪುರದಲ್ಲಿ ಜಹಾನ್ ಬೇಗಮಳ ಗೋರಿಯಿದೆ. ಇದೂ ಬಾರಾ ಕಮಾನ್‌ನಂತೆ ಅಪೂರ್ಣಗೊಂಡ ಕಟ್ಟಡ. ಎತ್ತರಿಸಲ್ಪಟ್ಟ ಜಗಲಿಯ ಮೇಲೆ ಸಾಲಾಗಿ ಹಸಿರು ಬಣ್ಣದ ಗೋರಿಕಲ್ಲುಗಳನ್ನು ಕಾಣಬಹುದು. ನಿಜವಾದ ಗೋರಿಗಳು ನೆಲಮಾಳಿಗೆಯಲ್ಲಿವೆ.

ಇದು ಐದಂತಸ್ತಿನ ಕಟ್ಟಡದಂತೆ ಕಾಣುತ್ತದೆ. ಈ ಸಮಾಧಿಯ ದಕ್ಷಿಣಕ್ಕೆ ಎತ್ತರದ ದಿಬ್ಬದ ಮೇಲೆ ಮಸೀದಿಯಿದೆ. ಇಡೀ ಪ್ರದೇಶವು ಎತ್ತರ ಕಲ್ಲಿನ ಗೋಡೆಯಿಂದ ಸುತ್ತುವರಿಯಲ್ಪಟ್ಟಿದೆ. ಇದರ ಪಕ್ಕದಲ್ಲಿರುವ ಖಾಸಗಿ ಜಮೀನಿನಲ್ಲಿ ಐನಾಪುರ ಮಹಲನ್ನೂ ಕಾಣಬಹುದು. ಇದು ಸುಂದರವಾದ ಕಲ್ಲಿನ ಕಟ್ಟಡ. ಇದರಲ್ಲಿ ನಯವಾದ ಗಾರೆಯ ಕೆಲಸವನ್ನು ನೋಡಬಹುದು.







## ಅಫ್ಜಲ್ ಖಾನನ ಸ್ಮಾರಕ ಸಮಾಧಿ

ಐನಾಪುರ ಗ್ರಾಮದ ಹೊರಭಾಗದಲ್ಲಿ ಅಫ್ಜಲ್ ಖಾನನ ಸ್ಮಾರಕ ಸಮಾಧಿ ಮತ್ತು ಮಸೀದಿಯನ್ನು ಕಾಣಬಹುದು. ಅಫ್ಜಲ್ ಖಾನನ ಕೊನೆಯ ಆಕ್ರಮಣ ಮತ್ತು ದುರಂತದ ಕಥೆಯು ದಖ್ಖಿನ್ ಇತಿಹಾಸದಲ್ಲಿ ಮೈನವಿರೇಳಿಸುವಂತಹುದು. ಈತ ಆದಿಲ್‌ಷಾಹಿಗಳ ಮುಖ್ಯ ಸೇನಾಧಿಕಾರಿಯಾಗಿದ್ದ.

ಈತ ಜೀವಿಸಿರುವಾಗಲೇ ತನ್ನ ಸಮಾಧಿಯ ನಿರ್ಮಾಣ ಪ್ರಾರಂಭಿಸಿದ್ದ. ಇದಕ್ಕೆ ಹೊಂದಿಕೊಂಡಂತೆ ಎರಡಂತಸ್ತಿನ ಮಸೀದಿಯು 1653ರಲ್ಲಿ ಪೂರ್ಣಗೊಂಡಿತು. ಅಫ್ಜಲ್‌ಖಾನನು ಶಿವಾಜಿಯ ವಿರುದ್ಧ



ಯುದ್ಧಕ್ಕೆ ಹೋಗುವ ವೇಳೆಗೆ ಅವನ ಸಮಾಧಿಯ ಕೆಲಸ ಇನ್ನೂ ಪೂರ್ಣಗೊಂಡಿರಲಿಲ್ಲ. ಈ ಸಮಾಧಿಗೆ ಅವನ ದೇಹವನ್ನು ತರಲೆ ಇಲ್ಲ. ಅದನ್ನು ಪ್ರತಾಪಗಡದ ಇಳಿಜಾರಿನಲ್ಲಿ, ಅವನು ಶಿವಾಜಿಯಿಂದ ಕೊಲ್ಲಲ್ಪಟ್ಟ ಸ್ಥಳದ ಸಮೀಪದಲ್ಲಿ ಹೂಳಲಾಯಿತು. ಆದರೂ ಅವನಿಗಾಗಿ ಕಟ್ಟಿದ ಸಮಾಧಿಯು ಹಾಗೆಯೇ ಉಳಿದಿದೆ. ಸಮಾಧಿಯ ಪಶ್ಚಿಮಕ್ಕೆ ಎರಡಂತಸ್ತಿನ ಮಸೀದಿಯಿದೆ.

ಇದರ ಮೇಲಂತಸ್ತನ್ನು ಅಫ್ಜಲ್‌ಖಾನನ ಸ್ತ್ರೀಯರಿಗಾಗಿಯೇ ಕಟ್ಟಲಾಯಿತೆಂದು ಹೇಳಲಾಗಿದೆ. ಮಸೀದಿ ಮತ್ತು ಸಮಾಧಿಯ ದಕ್ಷಿಣಭಾಗದಲ್ಲಿ ಅಫ್ಜಲ್ ಖಾನನ ಪಾಳುಬಿದ್ದ ಅರಮನೆಯಿದೆ.




ಈತನ ಸಮಾಧಿಯಿಂದ ಒಂದು ಕಿ.ಮೀ. ದಕ್ಷಿಣಕ್ಕೆ ಮರಗಳ ಮಧ್ಯೆ ಈತನ ಝುನಾನಾ ಸ್ತ್ರೀಯರ ಸಮಾಧಿಗಳಿವೆ. ವಿಸ್ತಾರವಾದ ಕಲ್ಲು ಕಟ್ಟೆಯ ಜಗತಿಯ ಮೇಲೆ ಹನ್ನೊಂದು ಸಾಲುಗಳಲ್ಲಿ 63 ಮಂದಿ ಮಹಿಳೆಯರ ಸಮಾಧಿಗಳಿವೆ. ಇನ್ನೊಂದು ಖಾಲಿ ಇರುವುದು 64ನೆಯವರಿಗೆ ಇರಬೇಕು. ಅಫ್ಜಲ್‌ಖಾನನು ಜ್ಯೋತಿಷಿಗಳು ನುಡಿದ ಭವಿಷ್ಯದಲ್ಲಿ ಅಂದರೆ ತಾನು



ಬಿಜಾಪುರಕ್ಕೆ ಹಿಂತಿರುಗುವುದಿಲ್ಲವೆಂಬ ಮಾತನ್ನು ಕೇಳಿ, ತಾನು ಹೊರಡುವ ಮೊದಲೇ ತನ್ನೆಲ್ಲ ಹೆಂಡಿರನ್ನು ನೀರಲ್ಲಿ ಮುಳುಗಿಸಿದ್ದ ಅವರಲ್ಲಿ ಒಬ್ಬಳು ತಪ್ಪಿಸಿಕೊಂಡಿದ್ದು ಉಳಿದವರ ದೇಹಗಳನ್ನು ಈ ಸಮಾಧಿಗಳಲ್ಲಿ ಹೂಳಲಾಯಿತೆಂದು ಹೇಳಲಾಗಿದೆ. ಅವರನ್ನು ಮುಳುಗಿಸಿ ಸಾಯಿಸಿದನೆಂದು ಹೇಳಲಾಗುವ ಭಾವಿ ಸಮೀಪದಲ್ಲೇ ಇದೆ.







## ಬಿಜಾಪುರದ ಚರ್ಚು

ನಗರದಲ್ಲಿ ಕೆಲವು ಚರ್ಚುಗಳು ಮತ್ತು ಜೈನ ದೇವಾಲಯಗಳಿವೆ. ಗಗನ್‌ಮಹಲ್‌ನ ಹಿಂಭಾಗದಲ್ಲಿರುವ ಆದಿಲ್‌ಶಾಹಿ ಕಾಲದ ಕಟ್ಟಡವನ್ನು ಚರ್ಚ್ ಆಗಿ ಬಳಸಲಾಗುತ್ತಿದೆ. ಇದು ಸುಂದರವಾದ ಮತ್ತು ಕಲಾತ್ಮಕವಾದ ಬಿಜಾಪುರ ಚಿತ್ರ ಕಲೆಯಿಂದ ಕೂಡಿದೆ.


ಜೈನ್ ದೇವಾಲಯದಲ್ಲಿನ ಸಹಸ್ರಫಣಿ ಪಾರ್ಶ್ವನಾಥ ವಿಗ್ರಹವು ಅಪರೂಪದ್ದಾಗಿದ್ದು, ಸೂಕ್ಷ್ಮವಾದ ಕೆತ್ತನೆಯನ್ನು ತಲೆಯ ಹಿಂಭಾಗದಲ್ಲಿ ಕಾಣಬಹುದಾಗಿದೆ.










1) ಓಗಾಪುರ ಮಸೀದಿ
2) ದೆವ್ವ ಹುಣಸಿ ಮರ
3) ಗೋಳ ಗುಮ್ಮಟ
4) ಹಾಸಿಂ ಪೀರ್ ದರ್ಗಾ
5) ಧರೀವಾಡಿ ಮಸೀದಿ
6) ಪರ್ಕನ್ನ ಮಸೀದಿ
7) ಹಾಜಿ ಹಸನ್ ಸಮಾಧಿ
8) ಕರೀಮ್ ಸಾಬ್ ದರ್ಗಾ
9) ಜುಮ್ಮ ಮಸೀದಿ
10) ಸೌಂದರೇಶಿ ದೇವಾಲಯ
11) ಬಹಾವುಲ್ಲಾ ಖಾನ್ ಮಸೀದಿ
12) ಇಬ್ರಾಹಿಂನ ಹಳೆಯ ಜುಮ್ಮ ಮಸೀದಿ
13) ಬಡೀ ಕಮಾನ್
14) ಮುಸ್ತಾಫ್ ಖಾನ್ ಮಸೀದಿ
15) ನೌ ಗುಂಬಜ್
16) ಇಖ್ಲಾಸ್ ಖಾನ್ ಮಸೀದಿ
17) ಮೆಹ್ತರ್ ಮಹಲ್
18) ಅಸರ್ ಮಹಲ್
19) ಜಹಾಜ್ ಮಹಲ್
20) ಯಾಕೂತ್ ದಬುಲಿಸ್ ಸಮಾಧಿ
21) ಪಾನಿ ಮಹಲ್
22) ಪಸ್ಸಾರಿ ಕಮಾನು
23) ಮೆಕ್ಕಾ ಮಸೀದಿ
24) ಅಸರ್ ಮಹಲ್
25) ಅದಾಲತ್ ಮಹಲ್
26) ಆನಂದ್ ಮಹಲ್
27) ಗಗನ್ ಮಹಲ್
28) ಚರ್ಚ್
29) ಜಲ ಮಹಲ್
30) ನರಸಿಂಹ ದೇವಾಲಯ
31) ಸಾತ್ ಮಂಜಿಲ್
32) ಕರೀಮುದ್ದೀನ್ ಮಸೀದಿ
33) ಅಂಡೂ ಮಸೀದಿ
34) ಬಾರಾ ಕಮಾನ್ (ಎರಡನೆಯ ಅಲಿ ಆದಿಲ್ ಷಾ)
35) ಮಲಿಕ್ ಸಾಂದಲ್ ಮಸೀದಿ
36) ಚಾಬುಕ್ ಸವಾರ್ ಸಮಾಧಿ
37) ಸಿದ್ದೇಶ್ವರ ದೇವಾಲಯ




38) ಸಿಕಂದರ್ ಷಾ ಸಮಾಧಿ
39) ಜಂಜೀರಿ ಮಸೀದಿ
40) ಗ್ರೀನ್ ಸ್ಟೋನ್ ಸಮಾಧಿ
41) ಮೊದಲನೆಯ ಅಲಿ ರೋಜಾ
42) ಸಯದ್ ಪೀರ್ ಖಾದ್ರಿ ಸಮಾಧಿ
43) ಗುಮ್ಮಟ್ ಬಾವಡಿ
44) ಜೋಡ್ ಗುಂಬಜ್
45) ತಾಜ್ ಬಾವಡಿ
46) ಉಪಲಿ ಬುರ್ಜ್
47) ಚಾಂದ್ ಬಾವಡಿ
48) ಮಲಿಕ್-ಎ-ಮೈದಾನ್ ತೋಪು
49) ಮುಲ್ಲಾ ಮಸೀದಿ
50) ಬಾರಾ ಕಾಂಗ್ ಮಸೀದಿ
51) ಸಹಸ್ರಫಣಿ ಪಾರ್ಶ್ವನಾಥ ದೇವಾಲಯ
52) ಇಬ್ರಾಹಿಂ ರೋಜಾ
53) ಧಾರವಾಡಿ ಮಸೀದಿ
54) ದರಿಯಾ ಎಖ್ಬಾರ್ ಖಾನ್ ಸಮಾಧಿ
55) ಮೋತಿ ಗುಂಬಜ್






ಬಿಜಾಪುರವು ರಾಷ್ಟ್ರೀಯ ಹೆದ್ದಾರಿ 13ರಲ್ಲಿದೆ.
ಇದು ಹುಬ್ಬಳ್ಳಿ-ಶೋಲಾಪುರ ರೈಲುಮಾರ್ಗದ ಸಂಪರ್ಕ ಹೊಂದಿದೆ.
ಹುಬ್ಬಳ್ಳಿ ಮತ್ತು ಬೆಳಗಾವಿ (200 ಕಿ.ಮೀ.) ಹತ್ತಿರದ ವಿಮಾನ ನಿಲ್ದಾಣಗಳಾಗಿವೆ.
ಬೆಂಗಳೂರಿಗೆ 525 ಕಿ.ಮೀ. ದೂರವಾಗುತ್ತದೆ.

---

ಆಕರ ಗ್ರಂಥಗಳು :


1. ಬಿಜಾಪುರ ಜಿಲ್ಲಾ ಗೆಜ್ಜೆಟಿಯರ್
2. ಡಾ॥ ಹೆಚ್.ಜಿ. ದಡ್ಡಿ - Glimpses of Adil Shahi Monuments
3. ಡಾ॥ ಸೂರ್ಯನಾಥ ಕಾಮತ - A Concise History of Karnataka





9788192397368

ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ

ಮೈಸೂರು